ಸಂಪುಟ : 8 ಸಂಚಿಕೆ 306 ಪುಟ : 4 ಬೆಲೆ : 3.00 ಗುರುವಾರ ಜನವರಿ 18, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ

Volume : 8 Issue : 306 Pages : 4 Price : 3.00 Thursday JANUARY 18, 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25




## ಇಂದಿನ ನೀರು ಪೂರೈಕೆ ವಿವರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಜನವರಿ 18ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ 15,16,17 ಶಹಾಪುರ ಪೇಟೆ, ಡಿಸಿ ಮಿಲ್ ರೋಡ್, ಜವಳಗಲ್ಲಿ, ಭಜಂತ್ರಿ ಓಣಿ, ಮೀನಿನ ಮಾರ್ಕೆಟ್ ರೋಡ್, ಮಹೇಂದ್ರಕರ್ ಸರ್ಕಲ್ ಲೈನ್, ಗಾಂಧಿ ಸರ್ಕಲ್, ಬಸವೇಶ್ವರ ಗುಡಿ ಲೈನ್, ಗಣೇಶ ಗುಡಿ ಲೈನ್ ಕೆಲವು ಭಾಗಗಳು.

ವಾರ್ಡ್ ನಂ. 31, 32 ರಂಗನವಾಡ ಜೋಡು ಮಾರುತಿ ಗುಡಿ ಲೈನ್, ಸುಣಗಾರ ಓಣಿ ಹಸಿರುಕೆರೆ ದಿಬ್ಬ, ತ್ರಿಕೋಟೇಶ್ವರ ರಸ್ತೆ, ವಾರ್ಡ್ ನಂ. 22 ದೊಡ್ಡ ಮಸೂತಿ 1600, 1400, 1800, 1200, 630 ಮನೆಗಳು, ಬಸ್ ಸ್ಟಾಪ್ ಎದುರಿನ ಲೈನ್, ಮಸೂತಿ ಹಿಂದಿನ ಲೈನ್- ಮುಂದಿನ ಲೈನ್.

ವಾರ್ಡ್ ನಂ. 24, 26 ಅಬ್ಬಿಗೇರಿ ಕಾಂಪೌಂಡ್, ಸಾಲಮನೆ 76 ಪ್ಲಾಟ್, ಕಮ್ಮಾರ ಸಾಲ, ಉಡಚಮ್ಮನ ಗುಡಿ ಲೈನ್, ಮಖಾನಗಲ್ಲಿ, ವಾರ್ಡ್ ನಂ. 5 ನೇಕಾರ ಕಾಲೋನಿ ನರಸಾಪುರ ಆಶ್ರಯ ಕಾಲೋನಿ

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಾಳೆ ಮಹಾಯೋಗಿ ವೇಮನ ಜಯಂತಿ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ , ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಗದಗ ಇವರ ಸಹಯೋಗದಲ್ಲಿ ಮಹಾಯೋಗಿ ವೇಮನ ಜಯಂತಿ ಕಾರ್ಯಕ್ರಮವನ್ನು ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಜನವರಿ 19ರಂದು ಬೆಳಿಗ್ಗೆ 10.30 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ.

ರಾಜ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಮುಖ್ಯಅತಿಥಿಗಳಾಗಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್ , ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ, ವಿಧಾನಪರಿಷತ್ ಸದಸ್ಯರುಗಳಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ್, ನರಗುಂದ ಶಾಸಕರಾದ ಸಿ.ಸಿ.ಪಾಟೀಲ, ರೋಣ ಶಾಸಕ ಜಿ.ಎಸ್.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ಗದಗ ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ ಆಗಮಿಸುವರು.

ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಕನ್ನಡ ಪ್ರಾಧ್ಯಾಪಕ ಡಾ.ರಮೇಶ್ ಕಲ್ಲನಗೌಡರ ಮಹಾಯೋಗಿ ವೇಮನರ ಜೀವನ ಮತ್ತು ಸಂದೇಶಗಳ ಕುರಿತು ಉಪನ್ಯಾಸ ನೀಡಲಿದ್ದಾರೆ.

ಪಂ. ವೆಂಕಟೇಶ್ ಅಲ್ಕೋಡ್ ಮತ್ತು ತಂಡದವರಿಂದ ವಚನ ಗಾಯನ ಸ್ಪರ್ಧೆ ಜರುಗಲಿದೆ. ವಾಣಿಜ್ಯ ತೆರಿಗೆ ಆಯುಕ್ತರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಶಿಖಾ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯ ಸ್ವಾಮಿ ಬಿ ಸ್ವಾಗತ ಕೋರಿದ್ದಾರೆ.

## ಮಡಿವಾಳ ಮಾಚಿದೇವ ಜಯಂತಿ: ಪೂರ್ವಭಾವಿ ಸಭೆ ನಾಳೆ

■ ವಿಜಯಸಾಕ್ಷಿ ಸುದ್ದಿ, ಗದಗ

ಸರ್ಕಾರದ ಆದೇಶದನ್ವಯ ಫೆಬ್ರುವರಿ 1ರಂದು ಆಚರಿಸಲಾಗುವ ಮಡಿವಾಳ ಮಾಚಿದೇವ ಜಯಂತಿ ನಿಮಿತ್ತ ಜನವರಿ 19ರಂದು ಸಂಜೆ 4.00 ಗಂಟೆಗೆ ಅಪರ ಜಿಲ್ಲಾಧಿಕಾರಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ.

ಸಭೆಗೆ ಹಾಜರಾಗಿ ಸಲಹೆ/ಅಭಿಪ್ರಾಯ ನೀಡಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವಿದ್ಯುತ್ ಅವಘಡದಲ್ಲಿ ಮೃತ ಯುವಕರ ಕುಟುಂಬಕ್ಕೆ 'ಯಶೋಮಾರ್ಗ'ದಿಂದ ಸಹಾಯಧನ

# ಕುಟುಂಬದ ದುಃಖದಲ್ಲಿ ನಾವೆಲ್ಲರೂ ಇದ್ದೇವೆ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ಸೂರಣಗಿ ಗ್ರಾಮದಲ್ಲಿ ಜ.7ರಂದು ನಟ ಯಶ್ ಅಭಿಮಾನಿಗಳು ಹುಟ್ಟುಹಬ್ಬದ ಕಟೌಟ್ ನಿಲ್ಲಿಸುವ ಸಂದರ್ಭದಲ್ಲಿ ವಿದ್ಯುತ್ ಸ್ಪರ್ಶದಿಂದ ಮೂವರು ಯುವಕರು ದುರ್ಮರಣಕ್ಕೀಡಾಗಿರುವ ಹಿನ್ನೆಲೆಯಲ್ಲಿ ಮೃತರ ಮನೆಗೆ ಬುಧವಾರ ಯಶೋಮಾರ್ಗ ಫೌಂಡೇಶನ್‌ನ ಯಶ್ ಆಪ್ತರ ತಂಡವು ಸೂರಣಗಿ ಗ್ರಾಮಕ್ಕೆ ಆಗಮಿಸಿ, ಫೌಂಡೇಶನ್ ವತಿಯಿಂದ ಮೃತರ ಕುಟುಂಬಕ್ಕೆ ತಲಾ 5 ಲಕ್ಷ ರೂ.ಗಳ ಸಹಾಯಧನದ ಚೆಕ್ಕನ್ನು ನೀಡಿ ಕುಟುಂಬಗಳಿಗೆ ಸಾಂತ್ವನ ಹೇಳಿದರು.

ಈ ಸಂದರ್ಭದಲ್ಲಿ ಚೇತನ, ರಾಕೇಶ್ ಅವರು ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಧೈರ್ಯ ತುಂಬಿದರಲ್ಲದೆ, ನಿಮ್ಮ ಜೊತೆ ನಾವಿದ್ದೇವೆ, ಯಶ್ ಅವರಿದ್ದಾರೆ, ಎದೆಗುಂದಬೇಡಿ ಎಂದು ಹೇಳಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಂದಿನ ಘೋರ ಘಟನೆಯಿಂದ ಕುಟುಂಬಸ್ಥರು ಹೊರಬಂದಿಲ್ಲ. ಅದೇ ರೀತಿ ಯಶ್ ಅವರು ಸಹ ಬಹಳ ನೋವಿನಲ್ಲಿದ್ದು, ಯಾವುದೇ ಶೂಟಿಂಗ್‌ಗಳಲ್ಲೂ ಭಾಗವಹಿಸುತ್ತಿಲ್ಲ. ಅವರಿಗೆ ಅಭಿಮಾನಿಗಳ ಸಾವು ತೀವ್ರ ದುಃಖ ತಂದಿದೆ.

ಈ ಕುಟುಂಬದ ದುಃಖದಲ್ಲಿ ನಾವೆಲ್ಲರೂ ಇದ್ದೇವೆ, ಧೈರ್ಯ ಕಳೆದುಕೊಳ್ಳುವದು ಬೇಡ. ಈಗ ಮೃತರ ಕುಟುಂಬಕ್ಕೆ ತಲಾ 5 ಲಕ್ಷ ರೂ. ಚೆಕ್ ವಿತರಣೆ ಮಾಡಲಾಗಿದೆ. ಅದರಂತೆ ಗಾಯಗೊಂಡವರ ಬ್ಯಾಂಕ್ ದಾಖಲೆಗಳನ್ನು ಪಡೆಯಲಾಗಿದ್ದು, ಕೂಡಲೇ ಅವರಿಗೂ ಸಹ ಸಹಾಯಧನ ನೀಡಲಾಗುವುದು. ಮಕ್ಕಳ ಅಗಲುವಿಕೆಯ ದುಃಖ ತಡೆದುಕೊಳ್ಳುವ ಶಕ್ತಿ ಕುಟುಂಬಗಳಿಗೆ ನೀಡಲಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಯಶೋಮಾರ್ಗ ಫೌಂಡೇಶನ್‌ನ ಜಿಲ್ಲಾಧ್ಯಕ್ಷ ಮಂಜುನಾಥ ದಾಮೋದರ, ರಾಘವೇಂದ್ರ ಪರಾಪೂರ, ರೋಹಿತ ಹಬೀಬ್, ರಜತ್ ಪಿ.ಕೆ, ಕೋಟೆಪ್ಪ ವರ್ದಿ, ವಿಜಯ ಹಳ್ಳಿ, ಪ್ರಕಾಶ ಕಳ್ಳಿಹಾಳ, ಸಂತೋಷ ಚಕ್ರಸಾಲಿ ಮುಂತಾದವರಿದ್ದರು.



ಘಟನೆ ನಡೆದ ಮರುದಿನವೇ ನಟ ಯಶ್ ಸೂರಣಗಿ ಗ್ರಾಮಕ್ಕೆ ಭೇಟಿ ನೀಡಿ ಕುಟುಂಬಸ್ಥರಿಗೆ ಧೈರ್ಯ ತುಂಬಿ, ನಿಮ್ಮ ಕುಟುಂಬದ ನೋವಿನಲ್ಲಿ ನಾನಿದ್ದೇನೆ ಎಂದಿದ್ದರು. ಅದರಂತೆ ಬುಧವಾರ ನಟ ಯಶ್ ಪರವಾಗಿ ಅವರ ಸ್ನೇಹಿತರಾದ ಚೇತನ್, ರಾಕೇಶ್ ಹಾಗೂ ಮನೇಶ್ ಮತ್ತಿತರರು ಮೃತ ಮುರುಳಿ, ನವೀನ್ ಮತ್ತು ಹನುಮಂತರವರ ಮನೆಗಳಿಗೆ ಭೇಟಿ ನೀಡಿದಾಗ ರೋದಿಸುತ್ತಾ, ಮನೆಗೆ ಆಧಾರವಾಗಿದ್ದ ನಮ್ಮ ಮಕ್ಕಳನ್ನು ಕಳೆದುಕೊಂಡಿದ್ದೇವೆ. ಎದೆ ಎತ್ತರಕ್ಕೆ ಬೆಳೆದು ದುಡಿಯುವ ಮಕ್ಕಳನ್ನು ಕಳೆದುಕೊಂಡಿದ್ದೇವೆ. ನೀವು ಕೊಡುವ ಈ ಪರಿಹಾರದಿಂದ ನಮ್ಮ ಮಗ ಬದುಕಿ ಬರುವನಾ ಎಂದು ರೋದಿಸತೊಡಗಿದರು.

### ರೋಣ ತಾಲೂಕಾ ಗುತ್ತಿಗೆದಾರರಿಂದ ಶಾಸಕ ಜಿ.ಎಸ್. ಪಾಟೀಲರಿಗೆ ಸನ್ಮಾನ

# ಕಾಂಗ್ರೆಸ್ ಸರ್ಕಾರದಿಂದ ಸಶಕ್ತ ಆಡಳಿತ

■ ವಿಜಯಸಾಕ್ಷಿ ಸುದ್ದಿ, ರೋಣ

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಜನತೆಗೆ ನೀಡಿದ್ದ ಐದು ಗ್ಯಾರಂಟಿಗಳನ್ನು ಸಮರ್ಥವಾಗಿ ಜಾರಿಗೆ ತರುವದಲ್ಲದೆ, ಇತರೆ ಅಭಿವೃದ್ಧಿ ಕಾರ್ಯಗಳಿಗೂ ಅನುದಾನವನ್ನು ಮೀಸಲಿಟ್ಟು ಸಶಕ್ತ ಆಡಳಿತ ನಡೆಸುತ್ತಿದೆ ಎಂದು ಶಾಸಕ ಜಿ.ಎಸ್. ಪಾಟೀಲ ಹೇಳಿದರು.

ಅವರು ಬುಧವಾರ ಪಟ್ಟಣದ ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ರೋಣ ತಾಲೂಕಾ ಲೋಕೋಪಯೋಗಿ ಹಾಗೂ ನೀರಾವರಿ ಇಲಾಖೆಗಳ ಗುತ್ತಿಗೆದಾರರ ಸಂಘ ಏರ್ಪಡಿಸಿದ್ದ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮುಂದಿನ ತಿಂಗಳು ಮುಖ್ಯಮಂತ್ರಿಗಳು ಬಜೆಟ್ ಮಂಡಿಸಲಿದ್ದು, ಬಜೆಟ್ ನಂತರ ರೋಣ ಮತಕ್ಷೇತ್ರದಲ್ಲಿ ಅಭಿವೃದ್ಧಿ ಪರ್ವ ಆರಂಭಗೊಳ್ಳಲಿದೆ. ಗುತ್ತಿಗೆದಾರರ ಸಮಸ್ಯೆಗಳನ್ನು ಆಂತರಿಕವಾಗಿ ಕಂಡಿದ್ದೇನೆ. ಸಾಲ-ಸೋಲ ಮಾಡಿಯಾದರೂ ಕ್ಷೇತ್ರದ ಅಭಿವೃದ್ಧಿಗೆ ಕೈಜೋಡಿಸುವ ಗುತ್ತಿಗೆದಾರರಿಗೆ ನ್ಯಾಯ ಒದಗಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ ಎಂದ ಶಾಸಕರು, ಕಡಿಮೆ ಮೊತ್ತಕ್ಕೆ ಟೆಂಡರ್ ಹಾಕಿದರೆ ಗುಣಮಟ್ಟದ ಕಾಮಗಾರಿಗಳು ನಡೆಯಲು ಸಾಧ್ಯವಿಲ್ಲ. ಹೀಗಾಗಿ, ಗುತ್ತಿಗೆದಾರರು ಸಹಕಾರ ಮನೋಭಾವನೆಯನ್ನು ತಾಳಬೇಕು ಎಂದು ಕಿವಿಮಾತು ಹೇಳಿದರು.




ಗ್ಯಾರಂಟಿಗಳನ್ನು ಈಡೇರಿಸುವ ಸಂಧರ್ಭದಲ್ಲಿ ಕೆಲ ತೊಂದರೆಗಳು ಆಗಿರಬಹುದು. ಹಾಗೆಂದು ಯಾವುದೇ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿಲ್ಲ. ಕಾಂಗ್ರೆಸ್ ಸಾಮಾಜಿಕ ಕಳಕಳಿಯನ್ನು ಹೊಂದಿರುವ ಪಕ್ಷವಾಗಿದ್ದು, ಈ ನಿಟ್ಟಿನಲ್ಲಿ ಎಲ್ಲ ಸಮುದಾಯಗಳಿಗೂ ನ್ಯಾಯವನ್ನು ಒದಗಿಸುವ ನಿಟ್ಟಿನಲ್ಲಿ ಕಾರ್ಯಕ್ರಗಳನ್ನು ರೂಪಿಸುತ್ತದೆ ಎಂದು ಶಾಸಕ ಜಿ.ಎಸ್. ಪಾಟೀಲ ನುಡಿದರು.

ಇದೇ ಸಂದರ್ಭದಲ್ಲಿ ಗುತ್ತಿಗೆದಾರ ಸಂಘದಿಂದ ಶಾಸಕ ಜಿ.ಎಸ್. ಪಾಟೀಲರನ್ನು ಸನ್ಮಾನಿಸಲಾಯಿತು. ಅಧ್ಯಕ್ಷತೆಯನ್ನು ತೋಟಪ್ಪ ನವಲಗುಂದ ವಹಿಸಿದ್ದರು. ಸಾನ್ನಿಧವನ್ನು ಗುರುಪಾದ ಶ್ರೀಗಳು, ಹಜರತ್ ಸುಲೇಮಾನ್ ಶ್ಯಾವಲಿ ಅಜ್ಜನವರು ವಹಿಸಿದ್ದರು. ಪುರಸಭೆ ಉಪಾಧ್ಯಕ್ಷ ಸಂಗನಗೌಡ ಪಾಟೀಲ, ವೀರಣ್ಣ ಶಿರೋಳ, ವಿ.ಜಿ. ಜಾವೂರಮಠ, ಐ.ವಿ.ಕೊಪ್ಪದ, ಎ.ಆರ್. ಕುರಹಟ್ಟಿ, ಎ.ಜಿ. ಚಿನ್ನೂರ, ಎಂ.ಜಿ. ಜಾವೂರಮಠ, ಡಾ. ಇಟಗಿ, ಅಶೋಕ ಕೊಪ್ಪದ, ಬಿ.ಆರ್. ತಹಸೀಲ್ದಾರ್, ಎಸ್.ಎಸ್. ಪಟ್ಟಣಶೆಟ್ಟಿ, ಮುತ್ತು ನವಲಗುಂದ, ಎನ್.ಎಚ್. ಕೋಲಕಾರ, ಎಂ.ಎನ್. ಹಾಳಕೇರಿ, ಆರ್.ಎ. ಗಿರಡ್ಡಿ, ಎಂ.ವಿ. ಗಾಣಿಗೇರ, ಎಸ್.ಎ. ಪಾಟೀಲ, ಶಿವಶರಣಪ್ಪ ಅಬ್ಬಿಗೇರಿ, ವಿ.ಬಿ. ಸೋಮನಕಟ್ಟಿಮಠ, ಯೂಸುಫ್ ಇಟಗಿ, ಬಸವರಾಜ ನವಲಗುಂದ, ಪಿ.ಬಿ. ಅಳಗವಾಡಿ, ರಾಜಣ್ಣ ಸುಂಕದ, ಕೆ.ಸಿ. ಪಾಟೀಲ, ಗದಿಗೆಪ್ಪ ಕಿರೇಸೂರ ಸೇರಿದಂತೆ ಪುರಸಭೆಯ ಸದಸ್ಯರು ಉಪಸ್ಥಿತರಿದ್ದರು.

## ನಿರ್ಭಯಾನಂದ ಸ್ವಾಮೀಜಿಗಳಿಗೆ ಅಯೋಧ್ಯಾ ಆಮಂತ್ರಣ



■ ವಿಜಯಸಾಕ್ಷಿ ಸುದ್ದಿ, ಗದಗ

ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ ಜ. 22ರಂದು ಶ್ರೀರಾಮ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಗದುಗಿನ ವಿವೇಕಾನಂದ ಆಶ್ರಮದ ಪೂಜ್ಯ ನಿರ್ಭಯಾನಂದ ಸ್ವಾಮೀಜಿ ಅವರು ಪಾಲ್ಗೊಳ್ಳಲು ಟ್ರಸ್ಟ್‌ನಿಂದ ಅಧಿಕೃತ ಆಮಂತ್ರಣವನ್ನು ಗದಗ ಜಿಲ್ಲಾ ವಿಶ್ವ ಹಿಂದೂ ಪರಿಷತ್ತು ನೀಡಿ ಆಮಂತ್ರಿಸಿತು.

ಶ್ರೀರಾಮ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ದೇಶದಾದ್ಯಂತ ಎಲ್ಲ ರಾಜ್ಯ, ಜಿಲ್ಲೆ, ತಾಲೂಕು, ಗ್ರಾಮಗಳಿಂದ ಸುಮಾರು 2ಸಾವಿರಕ್ಕೂ ಹೆಚ್ಚು ಪೂಜ್ಯರಿಗೆ ಅಧಿಕೃತ ಆಮಂತ್ರಣವಿದ್ದು ಗದಗ ಜಿಲ್ಲೆಯಿಂದ ಗದುಗಿನ ಶಿವಾನಂದ ಮಠದ ಪೂಜ್ಯ ಶಿವಾನಂದ ಭಾರತಿ ಸ್ವಾಮೀಜಿ ಹಾಗೂ ವಿವೇಕಾನಂದ ಆಶ್ರಮದ ಪೂಜ್ಯ ನಿರ್ಭಯಾನಂದ ಸ್ವಾಮೀಜಿ ಅವರಿಗೆ ವಿಶೇಷ ಆಮಂತ್ರಣವಿದೆ.

ಈ ಸಂದರ್ಭದಲ್ಲಿ ಗದಗ ಜಿಲ್ಲಾ ವಿಶ್ವ ಹಿಂದೂ ಪರಿಷತ್ತಿನ ಜಿಲ್ಲಾ ಕಾರ್ಯದರ್ಶಿ ರಾಘವೇಂದ್ರ ಹಬೀಬ, ವೀರಣ್ಣ ಹೇಮಾದ್ರಿ, ಮಾರುತಿ ಪವಾರ, ಪ್ರಲ್ಹಾದ ಇನಾಮದಾರ, ಸ್ವರೂಪ ಹುಬ್ಬಳ್ಳಿ ಮುಂತಾದವರಿದ್ದರು.

### ಕೂಸಿನ ಮನೆ ಆರೈಕೆದಾರರ ಮೂರು ದಿನಗಳ ತರಬೇತಿ ಕಾರ್ಯಾಗಾರ

# 'ಕೂಸಿನ ಮನೆ'ಯಿಂದ ಉದ್ಯೋಗಾವಕಾಶ

■ ವಿಜಯಸಾಕ್ಷಿ ಸುದ್ದಿ, ನರಗುಂದ

ಗ್ರಾಮೀಣ ಪ್ರದೇಶದ ಸಾಮಾನ್ಯ ವರ್ಗದ ಮಕ್ಕಳ ಲಾಲನೆ-ಪಾಲನೆಗೆ ರಾಜ್ಯ ಸರ್ಕಾರದ 'ಕೂಸಿನ ಮನೆ' ಕಾರ್ಯಕ್ರಮ ವರದಾನವಾಗಿದೆ. ಕೂಸಿನ ಮನೆ ಕಾರ್ಯಕ್ರಮದ ಅನುಷ್ಠಾನದಿಂದ ಗ್ರಾಮೀಣ ಮಹಿಳಾ ಕೂಲಿಕಾರರಿಗೆ ಉದ್ಯೋಗಾವಕಾಶ ದೊರೆಯಲಿದೆ ಎಂದು ನರಗುಂದ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ, ಕೂಸಿನ ಮನೆ ಕಾರ್ಯಕ್ರಮದ ತಾಲೂಕು ನೋಡಲ್ ಅಧಿಕಾರಿಗಳಾದ ಶ್ಯಾಮಸುಂದರ ಇನಾಮತಿ ಹೇಳಿದರು.

ನಗರದ ತಾ.ಪಂ ಸಭಾಭವನದಲ್ಲಿ ತಾ.ಪಂ ವತಿಯಿಂದ ಆಯೋಜಿಸಿದ್ದ ಕೂಸಿನ ಮನೆ ಆರೈಕೆದಾರರ ಮೂರು ದಿನಗಳ ತರಬೇತಿ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನರೇಗಾ ಕೆಲಸಕ್ಕೆ ಬರುವ ಮಹಿಳೆಯರು ತಮ್ಮ ಮಕ್ಕಳನ್ನು ಕೂಸಿನ ಮನೆಯಲ್ಲಿ ಬಿಟ್ಟು ಬರುವುದರಿಂದ ಮಕ್ಕಳಿಗೆ ಲಾಲನೆ-ಪಾಲನೆ ಜೊತೆ-ಗೆ ಪೌಷ್ಟಿಕಾಂಶವುಳ್ಳ ಆಹಾರ ದೊರಕುತ್ತದೆ. ಇದರಿಂದ ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರಿಗೆ ಉದ್ಯೋಗ ಸಿಗುವುದರೊಂದಿಗೆ ಮಕ್ಕಳಲ್ಲಿ ಪೌಷ್ಟಿಕಾಂಶದ ಕೊರತೆಯೂ ನೀಗುತ್ತದೆ ಎಂದು ತಿಳಿಸಿದರು. ▸▸3ನೇ ಪುಟಕ್ಕೆ



ತರಬೇತಿ ಕಾರ್ಯಕ್ರಮದಲ್ಲಿ ನರಗುಂದ ತಾ.ಪಂ ಐಇಸಿ ಸಂಯೋಜಕ ಸುರೇಶ್ ಬಾಳಿಕಾಯಿ ಮಾತನಾಡಿ, ಗದಗ ಜಿಲ್ಲೆಯಲ್ಲಿ ಒಟ್ಟು 109 ಕೂಸಿನ ಮನೆಗಳನ್ನು ಆರಂಭಿಸುವ ಗುರಿ ಹೊಂದಲಾಗಿದೆ. ಮೊದಲ ಹಂತದಲ್ಲಿ 69 ಕೂಸಿನ ಮನೆಗಳನ್ನು ಜಿಲ್ಲೆಯಾದ್ಯಂತ ಆರಂಭಿಸಲಾಗುತ್ತಿದ್ದು, ನರಗುಂದ ತಾಲೂಕಿನಲ್ಲಿ ಒಟ್ಟು 7 ಕೂಸಿನ ಮನೆಗಳನ್ನು ಅರಂಭಿಸಲಾಗುತ್ತಿದೆ ಎಂದರಲ್ಲದೆ, ಕೂಸಿನ ಮನೆ ಕಾರ್ಯಕ್ರಮದ ಉದ್ದೇಶ ಹಾಗೂ ಮಹತ್ವದ ಬಗ್ಗೆ ಆರೈಕೆದಾರರಿಗೆ ಮಾಹಿತಿ ನೀಡಿದರು.

## ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

2023-24 ನೇ ಸಾಲಿನ ಎರಡು ವರ್ಷದ ಬಿ.ಇಡಿ ಕೋರ್ಸಿನ ದಾಖಲಾತಿ ಪರಿಶೀಲನೆಗೆ ದಾಖಲಾತಿ ಪರಿಶೀಲನೆ ಮತ್ತು ಪ್ರವೇಶ ಪ್ರಕ್ರಿಯೆಯ ಮೊದಲ ಪಟ್ಟಿಯಲ್ಲಿ ಸೀಟು ಪಡೆದ ಅಭ್ಯರ್ಥಿಗಳಿಗೆ ಪ್ರವೇಶಾತಿ ಪತ್ರ ನೀಡಲು ಹಾಗೂ 3ನೇ ಸೂತ್ತಿನ ದಾಖಲೆಗಳ ಪರಿಶೀಲನೆಗೆ ಜನವರಿ 20 ಕೊನೆಯ ದಿನಾಂಕವಾಗಿರುತ್ತದೆ.

ಆಯ್ಕೆಯಾದ ಅಭ್ಯರ್ಥಿಗಳು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಕಳಸಾಪುರ ರೋಡ ಗದಗ ಇಲ್ಲಿ ಮೂಲ ದಾಖಲೆಗಳೊಂದಿಗೆ ಮತ್ತು ಒಂದು ಸೆಟ್ ಜರಾಕ್ಸ್ ಪ್ರತಿಯೊಂದಿಗೆ ಹಾಜರಾಗಿ ದಾಖಲೆಗಳ ಪರಿಶೀಲನೆ ಮಾಡಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ www.schooleducation.kar.nic.in ಜಾಲತಾಣವನ್ನು ಸಂಪರ್ಕಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಚಾರ್ಯರನ್ನು ಸಂಪರ್ಕಿಸಬಹುದಾಗಿದೆ.

## ಮುರುಡೇಶ್ವರ ಸಮುದ್ರದಲ್ಲಿ 'ಕಿಲ್ಲರ್' ತಿಮಿಂಗಲಗಳು ಗೋಚರ!

■ ವಿಜಯಸಾಕ್ಷಿ ಸುದ್ದಿ, ಉತ್ತರ ಕನ್ನಡ

ಮುರುಡೇಶ್ವರ ವ್ಯಾಪ್ತಿಯ ಅರಬ್ಬೀ ಸಮುದ್ರದಲ್ಲಿ ತಿಮಿಂಗಿಲಗಳು ಕಾಣಿಸಿಕೊಂಡಿವೆ. ನೇತ್ರಾಣಿ ದ್ವೀಪಕ್ಕೆ ಸಾಗುತ್ತಿದ್ದ ವೇಳೆ ತಿಮಿಂಗಿಲಗಳು ನೀರಿನಲ್ಲಿ ಚಲಿಸುತ್ತಿರುವುದು ಕಂಡಿದೆ.

ಪ್ರವಾಸಿಗರು ಬೋಟಿನಲ್ಲಿ ಸ್ಕೂಬಾ ಡೈವಿಂಗ್ ಮಾಡಲು ಸಾಗುತ್ತಿದ್ದಾಗ ವೇಳೆ ತಿಮಿಂಗಿಲಗಳು ಕಾಣಿಸಿಕೊಂಡಿವೆ. ಹತ್ತಿರದಲ್ಲೇ ತಿಮಿಂಗಿಲಗಳು ಒಂದರ ಹಿಂದೆ ಒಂದು ಸಾಗುವುದು ಕಂಡು ಪ್ರವಾಸಿಗರು ಅಚ್ಚರಿಗೊಂಡಿದ್ದಾರೆ.

ಇನ್ನು ಕೆಲವರು ತಿಮಿಂಗಿಲಗಳು ದೂರ ಹೋದದ್ದನ್ನು ನೋಡಿ ನಿಟ್ಟುಸಿರುಬಿಟ್ಟಿದ್ದಾರೆ. ಸ್ಕೂಬಾ ಡೈವ್ ಸಿಬ್ಬಂದಿ ತಿಮಿಂಗಿಲಗಳು ಓಡಾಡುವುದನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾರೆ.

ಭಟ್ಕಳದ ಬಳಿ ಬಲೀನ್ ತಿಮಿಂಗಿಲ ಕಾಣಿಸಿಕೊಂಡ ಎರಡು ವರ್ಷಗಳ ನಂತರ ಅಪರೂಪದ ದೃಶ್ಯ ಕಂಡುಬಂದಿದೆ. ಓರ್ಕಾ ತಿಮಿಂಗಿಲಗಳು ಒಂಟಿಯಾಗಿ ಅಥವಾ ಗುಂಪುಗಳಲ್ಲಿ ಕಾಣಿಸಿಕೊಂಡಿಲ್ಲ ಎಂದು ಸ್ಥಳೀಯ ನಿವಾಸಿಗಳು ಹೇಳುತ್ತಿದ್ದರೂ, ಪಶ್ಚಿಮ ಕರಾವಳಿಯಲ್ಲಿ ಈ ತಿಮಿಂಗಿಲಗಳು ವಾರ್ಷಿಕವಾಗಿ ಕಾಣಿಸಿಕೊಳ್ಳುತ್ತವೆ.

ಮೂರು ತಿಮಿಂಗಿಲಗಳು ಇದ್ದವು ಮತ್ತು ಅವು ಅರ್ಧ ಗಂಟೆಗೂ ಹೆಚ್ಚು ಕಾಲ ದೋಣಿಯ ಸುತ್ತಲೂ ಇದ್ದವು ಎಂದು ನೇತ್ರಾಣಿ ಅಡ್ವೆಂಚರ್ ಕ್ಲಬ್ ನಿರ್ವಹಿಸುವ ಗಣೇಶ ಹರಿಕಂತ್ರ ಹೇಳಿದ್ದಾರೆ. ಇದೊಂದು ವಾರ್ಷಿಕ ವಿದ್ಯಮಾನವಾಗಿದೆ ಮತ್ತು ಈ ತಿಮಿಂಗಿಲಗಳು ಪ್ರತಿ ವರ್ಷವೂ ಗೋಚರಿಸುತ್ತವೆ ಎಂದು ಸೆಟಾಸಿಯನ್ ಜೀವಶಾಸ್ತ್ರಜ್ಞ, ಸದಸ್ಯ ದಿಪಾನಿ ಸುತಾರಿಯಾ ತಿಳಿಸಿದ್ದಾರೆ.

### ಚಿಕ್ಕ ವಯಸ್ಸಿನಲ್ಲಿಯೇ ಸಾಧನೆಯ ಶಿಖರವೇರಿದ ಸಾಧಕನ ಪರಿಚಯ

# ಬದುಕಿನ ಯೋಗ ಬದಲಿಸಿದ 'ಯೋಗ'

ಯಶಸ್ಸು ಎಂಬುದು ಒಂದೇ ದಿನಕ್ಕೆ ದಕ್ಕುವಂಥ ಸಿಹಿ ಬುತ್ತಿಯಲ್ಲ. ಸಾಧಿಸುವ ಛಲ, ಒಂದಿಷ್ಟು ಕೌಟುಂಬಿಕ ಬಲ, ಸತತ ಅಧ್ಯಯನ ಮಾತ್ರ ಯಶಸ್ಸಿನ ಶಿಖರವನ್ನು ತಲುಪಿಸಬಲ್ಲದು. ಇಂಥ ಸಾಧನೆಯ ಫಲ ಸಿಹಿಯಾಗಿದ್ದರೂ, ಸಾಗುವ ಹಾದಿ ಮಾತ್ರ ಕಹಿ ಕಷ್ಟಗಳಿಂದಲೇ ಕೂಡಿರುತ್ತದೆ. ಚಿಕ್ಕ ವಯಸ್ಸಿನಲ್ಲಿಯೇ ಅಂಥದೊಂದು ಸಾಧನೆಯ ಗಿರಿ ಶಿಖರವೇರಿದ ಸಾಧಕನನ್ನು ನಿಮ್ಮೆಲ್ಲರಿಗೂ ಪರಿಚಯಿಸಲೇಬೇಕು.

ಅವರು ಸುಬ್ರಹ್ಮಣ್ಯ ಭಟ್ ಶಾನೇಪಾಲ್. ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಪುಟ್ಟ ಹಳ್ಳಿಯಾದ ಇಡಗುಂದಿಯವರು. ಯೋಗದಿಂದಲೇ ವೃದ್ಧಿ ಕಂಡುಕೊಂಡ ಇವರ ಸಾಧನೆಯ ಹಾದಿಯೇನೂ ಸರಳವಾಗಿರಲಿಲ್ಲ. ಪೌರೋಹಿತ್ಯದ ಹಿನ್ನೆಲೆಯುಳ್ಳ ಸಾಂಪ್ರದಾಯಿಕ ಕುಟುಂಬದಲ್ಲಿ ಅತ್ಯಂತ ಸಂಸ್ಕಾರಯುತ ವಾತಾವರಣದಲ್ಲಿ ಬೆಳೆದವರು. ಹೈಸ್ಕೂಲ್‌ವರೆಗಿನ ಶಿಕ್ಷಣವನ್ನು ಸ್ಥಳೀಯ ಶಿಕ್ಷಣ ಸಂಸ್ಥೆಯಲ್ಲಿ ಮುಗಿಸಿ, ನಂತರ ಸಂಸ್ಕೃತ ಹಾಗೂ ವೇದಾಧ್ಯಯನವನ್ನು ಒಟ್ಟಿಗೇ ಪೂರೈಸಬೇಕೆಂಬ ಉದ್ದೇಶದಿಂದ ಗೋಕರ್ಣದ ಶ್ರೀ ಭದ್ರಕಾಳಿ ಸಂಸ್ಕೃತ ಪಾಠಶಾಲೆಯಲ್ಲಿ ಅಧ್ಯಯನ ನಡೆಸಿದರು.

ಪ್ರಸ್ತುತ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಕೇವಲ ಒಂದೇ ಓದು ಸೂಕ್ತವಲ್ಲ ಎಂಬ ಭಾವನೆಯಿಂದ



ಅದೆಷ್ಟು ಓದುತ್ತಿದ್ದರೆಂದರೆ, ಸಂಸ್ಕೃತ ವಿದ್ವತ್, ಸಂಜೆ ಕಾಲೇಜಿನಲ್ಲಿ ಬಿ.ಎ ಅಧ್ಯಯನ, ಜ್ಯೋತಿಷ್ಯ ಅಧ್ಯಯನ ಇತ್ಯಾದಿಗಳು ಒಂದೇ ಹರಿವಿನಲ್ಲಿ ಸಾಗುತ್ತಲೇ ಇತ್ತು. ಮೈಸೂರಿನಿಂದ ಶೃಂಗೇರಿಯ ರಾಜೀವ ಗಾಂಧಿ ವಿಶ್ವವಿದ್ಯಾಲಯದಲ್ಲಿ ಜ್ಯೋತಿಷ್ಯ ಶಾಸ್ತ್ರದಲ್ಲಿ ಆಚಾರ್ಯ ಹಾಗೂ ಮುಕ್ತ ವಿಶ್ವವಿದ್ಯಾಲಯದಿಂದ ಎಂ.ಎ ಪದವಿಯನ್ನೂ ಪಡೆದುಕೊಂಡರು.

ಉತ್ತರ ಪ್ರದೇಶದ ಜಯಕೃಷ್ಣ ಎಂಬ ಸಹಪಾಠಿ ಯೋಗಾಚಾರ್ಯ ರಾಮದೇವರಿಂದ ಯೋಗ ತರಬೇತಿ ಪಡೆದವರು. ಅವರು ಪ್ರತಿನಿತ್ಯ ಕಾಲೇಜಿನ ಹತ್ತಿರವಿದ್ದ ದೇವಾಲಯದ ಬಳಿ ಯೋಗಾಭ್ಯಾಸ ಮಾಡುತ್ತಿದ್ದರು. ಸುಬ್ರಹ್ಮಣ್ಯರೂ ಅವರೊಟ್ಟಿಗೆ ನಿತ್ಯವೂ ಹೋಗಿ ಯೋಗಾಸನಗಳನ್ನು ಅಭ್ಯಾಸ ಮಾಡತೊಡಗಿದರು. ಯೋಗ ಶಿಕ್ಷಣದಲ್ಲಿ ಇವರ ಆಸಕ್ತಿ, ಹುಮ್ಮಸ್ಸು ಯಾವ ಮಟ್ಟಕ್ಕೆ ತಲುಪಿತೆಂದರೆ, ಪ್ರಸ್ತುತ ಓದಿನೊಂದಿಗೇ ಯೋಗ ಶಿಕ್ಷಣವನ್ನೂ ಪಡೆಯಲೇಬೇಕೆಂಬ ಛಲ ಮೂಡಿತ್ತು. ಅಲ್ಲಿಂದ ಆತ್ಮೀಯ ಉಪನ್ಯಾಸಕರ ಮಾಹಿತಿಯಂತೆ, ಮಂಗಳೂರಿನ ಕಾಲೇಜಿನಲ್ಲಿ ಎಂ.ಎಸ್‌ಸಿ ಇನ್ ಯೋಗಾಕ್ಕೆ ಪ್ರವೇಶ ಪಡೆದಾಗಿತ್ತು.

ಅಲ್ಲಿಂದ ಪ್ರಾರಂಭವಾದ ಇವರ 'ಯೋಗ' ಜೀವನ ಇಡೀ ಜೀವನದ ಯೋಗವನ್ನೇ ಬದಲಿಸಿತು. ಅಲ್ಲಿ ಯೋಗ ಶಿಕ್ಷಣ ಮುಗಿಸಿ ಬೆಂಗಳೂರು ಸೇರಿದರು. ಅಲ್ಲಿಯೂ ದಿನವಿಡೀ ಬಿಡುವಿಲ್ಲದ ಚಟುವಟಿಕೆ. ಬೆಳಿಗ್ಗೆ ಹಾಗೂ ಸಾಯಂಕಾಲ ಯೋಗ ತರಗತಿಗಳು. ಹೀಗೆ ದಿನಚರಿ ಆರು ತಿಂಗಳು ಸಾಗಿತು. ಇವರಿಂದ ಯೋಗ ಶಿಕ್ಷಣ ಪಡೆಯುತ್ತಿದ್ದವರೊಬ್ಬರು ಸಿಂಗಪುರ್‌ನ 'ಪ್ಲಾಟಿನಂ ಯೋಗ' ಎಂಬ ಶಿಕ್ಷಣ ಸಂಸ್ಥೆಯಲ್ಲಿ ಯೋಗ ಶಿಕ್ಷಕರ ಅಗತ್ಯವಿರುವದನ್ನು ತಿಳಿಸಿದಾಗ ಹೆಚ್ಚು ವಿಚಾರ ಮಾಡದೆಯೇ ಸಿಂಗಪುರಕ್ಕೆ ಸಂತಸದಿಂದಲೇ ಹೊರಟುನಿಂತರು.

ಅಲ್ಲಿನ ವಾತಾವರಣ, ಭಾಷೆ, ಆಹಾರ ಪದ್ಧತಿಗಳು ತುಸು ತೊಂದರೆಯಾಯ್ತು ಎಂದು ನಗುತ್ತಾರೆ ಸುಬ್ರಹ್ಮಣ್ಯ ಭಟ್. ಸತತ ನಾಲ್ಕು ವರ್ಷಗಳ ಕಾಲ ಪ್ಲಾಟಿನಂ ಯೋಗ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿ ಅನೇಕ ಪ್ರಶಸ್ತಿಗಳಿಗೂ ಭಾಜನರಾದರು. ನರೇಂದ್ರ ಮೋದಿಯವರು ಏರ್ಪಡಿಸಿದ್ದ 'ಮೈ ಲೈಫ್ ಮೈ ಯೋಗ' ಸ್ಪರ್ಧೆಯಲ್ಲಿ ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿಯನ್ನೂ ಪಡೆದರು.

ತಂದೆಯ ಅಗಲಿಕೆ, ಕೋವಿಡ್ ಸಾಂಕ್ರಾಮಿಕದ ಕಾರಣದಿಂದ ಸಿಂಗಪುರ್ ತೊರೆದು ಪ್ರಸ್ತುತ ಮೈಸೂರಿನಲ್ಲಿ ನೆಲೆಸಿರುವ ಸುಬ್ರಹ್ಮಣ್ಯ ಜೆಎಸ್‌ಎಸ್ ಕಾಲೇಜಿನಲ್ಲಿ ಒಂದೂವರೆ ವರ್ಷ ಯೋಗ ಶಿಕ್ಷಕರಾಗಿ ಕಾರ್ಯನಿರ್ವಹಿಸಿ, ಈಗ ನಿರ್ವಾಣ ಯೋಗ ಶಾಲೆಯಲ್ಲಿ ಯೋಗ ಶಿಕ್ಷಕರಾಗಿದ್ದಾರೆ. ಆನ್‌ಲೈನ್ ಯೋಗ ತರಗತಿಗಳನ್ನೂ ನಡೆಸುತ್ತಿದ್ದಾರೆ. ಪ್ರಸ್ತುತ ಪಿಎಚ್‌ಡಿ ಅಧ್ಯಯನವನ್ನೂ ನಡೆಸುತ್ತಿದ್ದಾರೆ. 'ಸಂಸ್ಕೃತ-ಯೋಗ-ಜ್ಯೋತಿಷ್ಯ ಇವೆಲ್ಲವೂ ನನ್ನ ಮೂಲ ಶಕ್ತಿಯಾಗಿದೆ. ಇದರಿಂದಲೇ ನಾನಾ ಕ್ಷೇತ್ರಗಳಲ್ಲಿ ನನ್ನನ್ನು ತೊಡಗಿಸಿಕೊಳ್ಳಲು ಸಾಧ್ಯವಾಗಿದೆ. ಸತತ ಅಧ್ಯಯನದಿಂದ ಮಾತ್ರ ಯಶಸ್ಸು ಸಿಗುತ್ತದೆ. ಯಾವ ಓದೂ ಕೂಡ ವ್ಯರ್ಥವಲ್ಲ. ಪ್ರತೀ ಅಧ್ಯಯನವೂ ಒಂದಿಲ್ಲೊಂದು ರೀತಿಯಲ್ಲಿ ಸಹಕಾರಿಯಾಗುತ್ತದೆ. ಇದೇ ನನ್ನ ಯಶಸ್ಸಿನ ಹಿನ್ನೆಲೆ' ಎನ್ನುತ್ತಾರೆ ಸುಬ್ರಹ್ಮಣ್ಯ ಭಟ್.



ಕರ್ನಾಟಕ ಪಾರಂಪರಿಕ ವೈದ್ಯ ಪರಿಷತ್ ಶಿವಮೊಗ್ಗ ವತಿಯಿಂದ ಸಾಂಕ್ರಾಮಿಕ ರೋಗಗಳು ಹಾಗೂ ಕೊರೋನ ವೈರಸ್ ಬರದಂತೆ ತಡೆಗಟ್ಟಲು ರೋಗನಿರೋಧಕ ಶಕ್ತಿ ಹೆಚ್ಚಿಸುವ 108 ಗಿಡಮೂಲಿಕೆಗಳಿಂದ ತಯಾರಿಸಿದ ಕಷಾಯವನ್ನು ಜ.17ರಂದು ಟಿಎಸ್‌ಡಬ್ಲ್ಯೂ ಕಾಲೋನಿ ಗಣಪತಿ ಪೆಂಡಾಲ್ ಆವರಣದಲ್ಲಿ ಪರಿಷತ್ ರಾಜ್ಯಾಧ್ಯಕ್ಷ ರಾಜು ಪಂಡಿತ್ ನೇತೃತ್ವದಲ್ಲಿ ಸಾರ್ವಜನಿಕರಿಗೆ ಉಚಿತವಾಗಿ ವಿತರಿಸಲಾಯಿತು.

## ವಿವೇಕಾನಂದರಂತೆ ಆದರ್ಶ ಜೀವಿಗಳಾಗಿ



■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಸಂಸ್ಕೃತಿ ಹಿನ್ನೆಲೆಯುಳ್ಳ ವಿಶ್ವ ಪರಂಪರೆಯ ಉತ್ತಮ ಸಂಸ್ಕಾರವೇ ನಮ್ಮ ದೇಶದ ಸಂಪತ್ತು ಎಂದು ಜಗತ್ತಿಗೇ ಸಾರಿ ಹೇಳಿದ ಕೀರ್ತಿ ಸ್ವಾಮಿ ವಿವೇಕಾನಂದರಿಗೆ ಸಲ್ಲುತ್ತದೆ ಎಂದು ನಿರ್ಮಲಾ ಹಿರೇಮಠ ಹೇಳಿದರು.

ಅವರು ನರೇಗಲ್ಲನ ಶ್ರೀ ಜಗದ್ಗುರು ಪಂಚಾಚಾರ್ಯ ಗ್ರಾಮಿಣಾಭಿವೃದ್ಧಿ ಶಿಕ್ಷಣ ಸಂಸ್ಥೆಯ ಶ್ರೀ ರೇಣುಕಾಚಾರ್ಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಸ್ವಾಮಿ ವಿವೇಕಾನಂದರ 161ನೇ ಜನ್ಮದಿನಾಚರಣೆ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು.

ಸ್ವಾಮಿ ವಿವೇಕಾನಂದರಂತಹ ಧೀಮಂತ ಸಂತನನ್ನು ಹೊಂದಿದ ರಾಷ್ಟ್ರ ನಮ್ಮದು. ಅಂತಹ ಆದರ್ಶ ವ್ಯಕ್ತಿಯ ಜೀವನ ಚರಿತ್ರೆಯನ್ನು ತಿಳಿದ ನೀವು ಸಹ ಆದರ್ಶ ಜೀವಿಗಳಾಗಿ ಬಾಳಿರಿ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ವಿಶ್ವಾರಾಧ್ಯ ಹಿರೇಮಠ ಸ್ವಾಮಿ ವಿವೇಕಾನಂದ ವೇಷದಲ್ಲಿ ಎಲ್ಲರ ಗಮನ ಸೆಳೆದರು. ಶಿಕ್ಷಕ ಈಶ್ವರ ಆದಿ, ಎ.ಎಮ್. ಬೆಟಗೇರಿ, ಜಯಶ್ರೀ ಗಂಗರಗೊಂಡ, ಬಸವರಾಜ ತಳುವಗೇರಿ ಸೇರಿದಂತೆ ಸಹ ಶಿಕ್ಷಕಿಯರು ಉಪಸ್ಥಿತರಿದ್ದರು. ಸುಮಾ ಕಲ್ಲೂರ ಸ್ವಾಗತಿಸಿದರು. ಬಿಂಗಿ ನಿರೂಪಿಸಿ, ವಂದಿಸಿದರು.

## ಸಮಾಜ ಸೇವೆಯಲ್ಲಿ ಇನ್ನರ್ ವ್ಹೀಲ್ ಪಾತ್ರ ಹಿರಿದು



■ ವಿಜಯಸಾಕ್ಷಿ ಸುದ್ದಿ, ಗದಗ

ಇನ್ನರ್‌ವ್ಹೀಲ್ ಕ್ಲಬ್ ಸಾರ್ವಜನಿಕರ ಸೇವೆಯಲ್ಲಿ ಮುಂಚೂಣಿಯಲ್ಲಿದೆ. ಕ್ಲಬ್ ಸದಸ್ಯೆಯರೆಲ್ಲರೂ ಹಲವಾರು ಸಕ್ರಿಯ ಕಾರ್ಯಗಳನ್ನು ಕೈಗೊಳ್ಳುವ ಜೊತೆಗೆ ಸಮಾಜ ಸೇವೆಗೆ ತಮ್ಮನ್ನು ತೊಡಗಿಸಿಕೊಂಡಿರುವದು ಶ್ಲಾಘನೀಯವಾಗಿದೆ ಎಂದು ಇನ್ನರ್ ವ್ಹೀಲ್ ಕ್ಲಬ್ ಗದಗ-ಬೆಟಗೇರಿ ಅಧ್ಯಕ್ಷೆ ರಜನಿ ಪಾಟೀಲ ಹೇಳಿದರು.

ಅವರು ನಗರದ ಐ ಕೇರ್ ಸೆಂಟರ್‌ನಲ್ಲಿ ಇನ್ನರ್ ವ್ಹೀಲ್ ಕ್ಲಬ್ ಗದಗ- ಬೆಟಗೇರಿ ವತಿಯಿಂದ ಹಮ್ಮಿಕೊಂಡಿದ್ದ 'ಇನ್ನರ್ ವ್ಹೀಲ್ ಡೇ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನಂತರ ನಡೆದ ಮನರಂಜನಾ ಕ್ರೀಡೆಗಳಲ್ಲಿ ಆಶಾ ಪಟ್ಟಣಶೆಟ್ಟಿ, ಸುಶೀಲಾ ಕೋಟಿ, ಅನುಪಮಾ ಮಾಳೇಕೊಪ್ಪಮಠ, ದೀಪಾ ಪಟ್ಟಣಶೆಟ್ಟಿ, ರೇಖಾ ರೊಟ್ಟಿ, ಮಂಜುಳಾ ಹಲಗತ್ತಿ ವಿಜೇತರಾದರು. ನಿರ್ಣಾಯಕರಾಗಿ ಆಶಾ ಹುಕ್ಕೇರಿ, ಹೇಮಾ ಪೊಂಗಾಲಿಯಾ, ವಿದ್ಯಾ ಗಂಜಿಹಾಳ ಕಾರ್ಯ ನಿರ್ವಹಿಸಿದರು. ವಿಜೇತರಿಗೆ ರಜನಿ ಪಾಟೀಲ ಬಹುಮಾನ ವಿತರಿಸಿದರು. ಕ್ಲಬ್ ಅಧ್ಯಕ್ಷೆ ರಜನಿ ಪಾಟೀಲರನ್ನು ಸರೋಜ ಆಲೂರ ಸನ್ಮಾನಿಸಿ ಗೌರವಿಸಿದರು.

ವೇದಿಕೆಯಲ್ಲಿ ಕಾರ್ಯದರ್ಶಿ ಹೇಮಾ ಪೊಂಗಲಿಯಾ, ಸರೋಜಾ ಆಲೂರು ಉಪಸ್ಥಿತರಿದ್ದರು. ಸದಸ್ಯರಾದ ಮೀನಾಕ್ಷಿ ಸಜ್ಜನರ್, ಮಂಗಲಾ ಅಬ್ಬಿಗೇರಿ, ಸುಮಾ ಪಾಟೀಲ, ನಾಗರತ್ನಾ ಮಾರನಬಸರಿ, ಸಂಧ್ಯಾ ಕೋಟಿ, ಸುಶೀಲಾ ಕೋಟಿ, ಶಿವಲೀಲಾ ಅಕ್ಕಿ, ಜಯಶ್ರೀ ಪಾಟೀಲ, ಶಾಂತಾ ಮುಂದಿನಮನಿ, ಸುಶೀಲಾ ಬಾಗಮಾರ, ಕಸ್ತೂರಿ ಹಿರೇಗೌಡರ, ಆಶಾ ಪಟ್ಟಣಶೆಟ್ಟಿ, ಶಾಂತಾ ಗೌಡರ, ಪವಿತ್ರಾ ಮೊಲಾದವರು ಭಾಗವಹಿಸಿದ್ದರು.

ಸಹ ಕಾರ್ಯದರ್ಶಿ ವಿದ್ಯಾ ಗಂಜಿಹಾಳ ಪ್ರಾರ್ಥಿಸಿದರು. ಪ್ರೇಮಾ ಹಂದಿಗೋಳ ಭಾವಗೀತೆ ಹಾಡಿದರು. ರಜನಿ ಪಾಟೀಲ ಸ್ವಾಗತಿಸಿದರೆ, ಹೇಮಾ ಪೊಂಗಾಲಿಯಾ ವಂದಿಸಿದರು.



■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ನರೇಗಲ್ಲ ಸಮೀಪದ ಹಾಲಕೆರೆ ಸಂಸ್ಥಾನ ಮಠದ ಅಕ್ಷರ ಜಾತ್ರೆ ಅಂಗವಾಗಿ ನರೇಗಲ್ಲ ಬಸ್ ನಿಲ್ದಾಣದ ಬಳಿಯ ಶ್ರೀ ಹುಚ್ಚೀರೇಶ್ವರ ಬೇಕರಿಯ ಶಿವಕುಮಾರ ಮುಳಗುಂದ ಜಾತ್ರೆಗೆ ಹೊರಡುವ ಭಕ್ತರಿಗಾಗಿ ತಮ್ಮ ಬೇಕರಿ ಮುಂದೆ ಶುದ್ಧ ನೀರಿನ ವ್ಯವಸ್ಥೆ ಕಲ್ಪಿಸಿದ್ದರು. ಪ್ರತಿನಿತ್ಯ ನೀರಿನ ಅರವಟ್ಟಿಗೆ ಇರಿಸಿ ಭಕ್ತರ ಬಾಯಾರಿಕೆ ಇಂಗಿಸುವಲ್ಲಿ ಶಿವುಕುಮಾರ ಮುಳಗುಂದ ಕೈಜೋಡಿಸಿದರು.

# ಆಟದ ಮೈದಾನ ತೆರೆದ ಕೊಠಡಿಯಿದ್ದಂತೆ

■ ವಿಜಯಸಾಕ್ಷಿ ಸುದ್ದಿ, ಗದಗ

ವಿದ್ಯಾರ್ಥಿಗಳು ಮೌಲ್ಯಗಳನ್ನು ಕಲಿಯಲು ಕ್ರೀಡೆಗಳು ಸಹ ಸಹಕಾರಿಯಾಗಿದ್ದು, ಆಟದ ಮೈದಾನ ವಿದ್ಯಾರ್ಥಿಗಳಿಗೆ ತೆರೆದ ಕೊಠಡಿಯಿದ್ದಂತೆ ಎಂದು ನಿವೃತ್ತ ಡಿಡಿಪಿಐ ಹಾಗೂ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಕಾರ್ಯನಿರ್ವಾಹಕ ಅಧಿಕಾರಿ ಐ.ಬಿ. ಬೆನಕೊಪ್ಪ ನುಡಿದರು.

ಅವರು ಇತ್ತೀಚೆಗೆ ನಗರದ ತೋಂಟದಾರ್ಯ ಕನ್ನಡ ಹಾಗೂ ಆಂಗ್ಲಮಾಧ್ಯಮ ಶಾಲೆಯಲ್ಲಿ ಜರುಗಿದ ವಾರ್ಷಿಕ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿ, ಕ್ರೀಡಾ ಕ್ಷೇತ್ರದಲ್ಲಿ ಈ ಶಾಲೆಯ ವಿದ್ಯಾರ್ಥಿಗಳು ರಾಜ್ಯ-ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿರುವುದು ಗಮನಾರ್ಹ ಎಂದರಲ್ಲದೆ, ತೋಂಟದಾರ್ಯ



ವಿದ್ಯಾಪೀಠದ ಕಾರ್ಯದರ್ಶಿಗಳಾದ ಎಸ್.ಎಸ್. ಪಟ್ಟಣಶೆಟ್ಟರ ಅವರ ಅವಿರತ ಶ್ರಮವನ್ನು ಶ್ಲಾಘಿಸಿ ಅವರ ಕಾಯಕನಿಷ್ಠೆಯನ್ನು ಎಲ್ಲರೂ ಅಳವಡಿಸಿಕೊಳ್ಳಲು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ತಾಲೂಕಾ ದೈಹಿಕ ಶಿಕ್ಷಣಾಧಿಕಾರಿ ಜಗದೀಶ ಮಾತನಾಡಿ, ಹತ್ತು ಆಸ್ಪತ್ರೆಗಳನ್ನು ನಿರ್ಮಿಸುವುದಕ್ಕಿಂತ ಆರೋಗ್ಯವನ್ನು ವೃದ್ಧಿಸುವ ಒಂದು ಕ್ರೀಡಾಂಗಣವನ್ನು ನಿರ್ಮಿಸಬೇಕು. ತೋಂಟದಾರ್ಯ ಮಠದ ಶಿಕ್ಷಣ ಸಂಸ್ಥೆಗಳು ಶಿಕ್ಷಣದಷ್ಟೇ ಆದ್ಯತೆಯನ್ನು ಕ್ರೀಡೆಯಂಥ ಸಹಪಠ್ಯ ಚಟುವಟಿಕೆಗಳಿಗೂ ನೀಡುತ್ತಿದ್ದು, ವಿದ್ಯಾರ್ಥಿಗಳು ಕ್ರೀಡೆಯನ್ನು ಹಬ್ಬದಂತೆ ಆಚರಿಸಿದ ಹಾಗೆ ಪರೀಕ್ಷೆಯನ್ನೂ ಒಂದು ಹಬ್ಬವೆಂದು ತಿಳಿಯಲು ಕಿವಿಮಾತು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ತೋಂಟದಾರ್ಯ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಕೊಟ್ರೇಶ ಮೆಣಸಿನಕಾಯಿ ಮಾತನಾಡಿ, ಕುಸ್ತಿ ಸ್ಪರ್ಧೆಯಲ್ಲಿ ರಾಜ್ಯಮಟ್ಟದ ಕ್ರೀಡೆಯಲ್ಲಿ ಭಾಗವಹಿಸಿದ ನಮ್ಮ ಶಾಲೆಯ ವಿದ್ಯಾರ್ಥಿನಿ ಭುವನೇಶ್ವರಿ ಕೋಳಿವಾಡ ಸತತ ಛಲದಿಂದ ಆ ಹಂತಕ್ಕೆ ಏರಿ ಮಾದರಿಯಾಗಿದ್ದಾಳೆ. ವಿದ್ಯಾರ್ಥಿಗಳು ಯಾವುದೇ ಸಾಧನೆ ಮಾಡಲು ಛಲ ಇರಬೇಕು ಎಂದರು.

ವೇದಿಕೆ ಮೇಲೆ ಶಿಕ್ಷಣ ಸಂಸ್ಥೆಯ ಸದಸ್ಯರಾದ ಅಮರೇಶ ಅಂಗಡಿ, ಪ್ರಾಥಮಿಕ ವಿಭಾಗದ ಮುಖ್ಯೋಪಾಧ್ಯಾಯ ನಾಗರಾಜ ಗಾಳಿ, ಕುಸ್ತಿಪಟು ಭುವನೇಶ್ವರಿ ಕೋಳಿವಾಡ ಉಪಸ್ಥಿತರಿದ್ದರು. ಶಾಲೆಯ ಶಿಕ್ಷಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

## ಮನೋರಮಾ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಯುವ ದಿನ



■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಮನೋರಮಾ ಮಹಾವಿದ್ಯಾಲಯದಲ್ಲಿ ಸ್ವಾಮಿ ವಿವೇಕಾನಂದರ ಜಯಂತಿಯ ನಿಮಿತ್ತ ರಾಷ್ಟ್ರೀಯ ಯುವ ದಿನ ಆಚರಿಸಲಾಯಿತು. ಈ ಸಂದರ್ಭದಲ್ಲಿ ಪ್ರಾಚಾರ್ಯ ಬಿ.ಎಸ್. ಹಿರೇಮಠ ಮಾತನಾಡಿ, ಸ್ವಾಮಿ ವಿವೇಕಾನಂದರು ತತ್ವಜ್ಞಾನಿ, ಆಧ್ಯಾತ್ಮ ಜೀವಿ, ದೇಶದ ಶಕ್ತಿಯಾಗಿದ್ದ ಸ್ವಾಮಿ ವಿವೇಕಾನಂದರು ಮಹಾ ಗ್ರಂಥಗಳನ್ನು ಅಧ್ಯಯನ ಮಾಡಿ ಭಾರತದ ಸಂಸ್ಕೃತಿ ಮತ್ತು ಮೌಲ್ಯಗಳನ್ನು ಪಾಶ್ಚಿಮಾತ್ಯ ದೇಶಗಳಿಗೆ ಸರ್ವಧರ್ಮ ಸಮ್ಮೇಳನದ ಮೂಲಕ ತಿಳಿಸಿಕೊಟ್ಟು ಭಾರತವನ್ನು ವಿಶ್ವದಲ್ಲಿ ಎತ್ತಿ ಹಿಡಿದ ಮಹಾ ಜ್ಞಾನಿ ಎಂದರು.

ಆಡಳಿತಾಧಿಕಾರಿ ಕಿಶೋರ ಮುದಗಲ್ಲ ಮಾತನಾಡಿದರು. ಕಾಲೇಜಿನ ವಿದ್ಯಾರ್ಥಿಗಳು ಸ್ವಾಮಿ ವಿವೇಕಾನಂದರ ವಿಚಾರಧಾರೆ ಹಾಗೂ ಜೀವನ ಚರಿತ್ರೆ, ಮೌಲ್ಯಗಳ ಕುರಿತು ಮಾತನಾಡಿದರು. ಸಂಸ್ಥೆಯ ನಿರ್ದೇಶಕರಾದ ಮಂಜುನಾಥ ಕುಡತರಕರ, ಸಂಜಯ ಕುಡತರಕರ, ಚೇತನ ಕುಡತರಕರ, ಸಹ ಸಂಯೋಜಕಿಯರಾದ ಪ್ರೊ. ಸವಿತಾ ಪೂಜಾರ, ಪ್ರೊ. ಅಲ್ವಿನಾ ಡಿ., ಪ್ರೊ. ಚೈತ್ರಾ ದಲಬಂಜನ, ಪಿಯು ಸಂಯೋಜಕರಾದ ಪ್ರೊ. ಶಾಹಿದಾ ಶಿರಹಟ್ಟಿ, ಪ್ರೊ. ಸಂಗಮೇಶ ಹಾದಿಮನಿ, ದೈಹಿಕ ನಿರ್ದೇಶಕ ಖಯುಮ ನವಲೂರ, ಮಹಾವಿದ್ಯಾಲಯದ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಶ್ರೀ ದುರ್ಗಾದೇವಿ ಶಿಕ್ಷಣ ಸಮಿತಿಯಲ್ಲಿ 'ಮಕ್ಕಳ ಹಬ್ಬ'

■ ವಿಜಯಸಾಕ್ಷಿ ಸುದ್ದಿ, ಗದಗ

ಮಕ್ಕಳ ಭವಿಷ್ಯದ ನಿರ್ಮಾಣದಲ್ಲಿ ತಾಯಿಯ ಪಾತ್ರ ಮಹತ್ವದ್ದಾಗಿದೆ. ನಾಡಸೇವೆ, ದೇಶಸೇವೆ ಹಾಗೂ ಸಂಕಷ್ಟಗಳನ್ನೆದುರಿಸುವ ಶಕ್ತಿ ತುಂಬುವ ಕೆಲಸವನ್ನು ತಾಯಂದಿರು ಮಾಡಬೇಕೆಂದು ಶಹರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್. ಬುರುಡಿ ಹೇಳಿದರು.

ನಗರದ ಶ್ರೀ ದುರ್ಗಾದೇವಿ ಶಿಕ್ಷಣ ಸಮಿತಿಯಲ್ಲಿ ಕರ್ನಾಟಕ ವೈಜ್ಞಾನಿಕ ಸಂಶೋಧನಾ ಪರಿಷತ್ ಹಾಗೂ ಶ್ರೀ ದುರ್ಗಾದೇವಿ ಶಿಕ್ಷಣ ಸಮಿತಿ ವತಿಯಿಂದ ಜರುಗಿದ ಸ್ವಾಮಿ ವಿವೇಕಾನಂದರ ಜಯಂತಿ, 18ನೇ ವಾರ್ಷಿಕ ಸ್ನೇಹ ಸಮ್ಮೇಳನ ಮತ್ತು ಮಕ್ಕಳ ಹಬ್ಬ 2023-24



ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂಪನ್ಮೂಲ ವ್ಯಕ್ತಿ ಕವಿತಾ ದಂಡಿನ ಮಾತನಾಡಿ, ಮಕ್ಕಳಿಗೆ ಬರಿಯ ಶಿಕ್ಷಣ ನೀಡದೆ, ಅವರಿಗೆ ನೈತಿಕ, ಸಾಮಾಜಿಕ, ದೇಶಭಕ್ತಿ ಮತ್ತು ಸಂಸ್ಕಾರವನ್ನು ನೀಡಿದರೆ ಮಕ್ಕಳು ಸಮಾಜಕ್ಕೆ ಮಾದರಿಯಾಗುತ್ತಾರೆ. ಭವ್ಯ ಭಾರತದ ಭವಿಷ್ಯದ ಮಕ್ಕಳನ್ನು ಬೆಳೆಸುವ ಜವಾಬ್ದಾರಿ ಪಾಲಕರ ಮೇಲಿದೆ ಎಂದರು.

ಎಂ.ಎಸ್. ಪೂಜಾರ ಸಾಂದರ್ಭಿಕ ನುಡಿಗಳನ್ನಾಡಿದರು. ಬಿಇಓ ಆರ್.ಎಸ್. ಬುರುಡಿ, ಜಿಲ್ಲಾ ವಾರ್ತಾಧಿಕಾರಿ ವಸಂತ ಮಡ್ಲೂರ, ಎಂ.ಎಸ್. ಪೂಜಾರ, ವಾರ್ತಾ ಇಲಾಖೆಯ ವಿಜಯಕುಮಾರ ಬೆಟಗೇರಿ, ಶಿಕ್ಷಣ ಇಲಾಖೆಯ ಗಂಗಾಧರ ಕವಳಿಕಾಯಿ, ಅಮರೇಶ ನೇಗಳೂರ, ಕವಿತಾ ದಂಡಿನ, ಜೆ.ಎಸ್. ಜೇವರ್ಗಿ, ಪ್ರಕಾಶ ಮಂಗಳೂರು, ವಿನೋದ ದಾಸರಿ, ಪಾರಂಪರಿಕ ವೈದ್ಯರಾದ ಎಸ್.ಜಿ. ಹಳ್ಳಿಕೇರಿ ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಸಾವಿತ್ರಿ ಕವಡಕಿ, ಮೋಹನ ಇಮರಾಪೂರ, ಉಮಾ ಇಮರಾಪೂರ, ಕವಿತಾ ಇಮರಾಪೂರ, ಮುತ್ತು ಜಡಿ, ಎಚ್.ಎಂ. ನದಾಫ್, ಎಂ.ಎಂ. ಹಿಡ್ಕೀಮಠ, ಆರ್.ಎಂ. ಅಂಗಡಿ, ಎಸ್.ವೈ. ತಿರಕಣ್ಣವರ, ವಿ.ವಿ. ಕಲ್ಮನಿ, ಜೆ.ವಿ. ಅರಸಿದ್ದಿ, ಎಸ್.ಎ. ಕರೆಸಾಬಣ್ಣವರ ಮುಂತಾದವರು ಉಪಸ್ಥಿತರಿದ್ದರು.

# ಅಗಸ್ತ್ಯತೀರ್ಥ ಕ್ಷೇತ್ರದಲ್ಲಿ ಸಂಕ್ರಾಂತಿ ಪುಣ್ಯಸ್ನಾನ



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಉತ್ತರಾಯಣ ಪುಣ್ಯಕಾಲದ ಮಕರ ಸಂಕ್ರಾಂತಿಯಂದು ಪಟ್ಟಣದ ಐತಿಹಾಸಿಕ ಪ್ರಸಿದ್ಧ ಅಗಸ್ತ್ಯತೀರ್ಥ ಕ್ಷೇತ್ರ ಭಾವಿಯಲ್ಲಿ ಭಕ್ತಾದಿಗಳು ಪುಣ್ಯಸ್ನಾನ ಮಾಡಿ ಪುನೀತರಾದರು.

ಪ್ರತಿ ವರ್ಷ ಸಂಕ್ರಾಂತಿಯ ದಿನವೇ ಈ ಕ್ಷೇತ್ರದ ಜಾತ್ರಾಮಹೋತ್ಸವ ಇರುವುದರಿಂದ ಭಕ್ತರು ಪ್ರತ್ಯೇಕ ಬಾವಿಯಲ್ಲಿ ಪುಣ್ಯಸ್ನಾನ ಮಾಡಿ, ಮಡಿ ಉಡಿಯಿಂದ ಇಲ್ಲಿನ ಶಿವನ ಮೂರ್ತಿಗೆ ಪೂಜೆ ಸಲ್ಲಿಸಿ ಪ್ರಾರ್ಥಿಸುತ್ತಾರೆ.

ವೇದ ಮಹರ್ಷಿ ಅಗಸ್ತ್ಯಮುನಿಗಳು ತಪಸ್ಸು ಮಾಡಿ ಶಿವಲಿಂಗ ಪ್ರತಿಷ್ಠಾಪಿಸಿದ ಈ ಕ್ಷೇತ್ರ ಪುಣ್ಯಕ್ಷೇತ್ರ ಎಂದೇ ಪ್ರಸಿದ್ಧವಾಗಿದೆ. ಸಂಕ್ರಮಣ ಕಾಲದಲ್ಲಿ ಇಲ್ಲಿ ಪುಣ್ಯ ಸ್ನಾನ ಮಾಡುವುದರಿಂದ ರೋಗ ರುಜಿನಗಳು ಮಾಯವಾಗಿ, ಪಾಪಕರ್ಮಗಳು ಕಳೆದು ಪುಣ್ಯ ಲಭಿಸುತ್ತದೆ ಎಂಬ ನಂಬಿಕೆಯೂ ಇದೆ.

ಇಲ್ಲಿನ ಅಕ್ಕ-ತಂಗಿಯರ ಬಾವಿ ಎಂದು ಕರೆಯಲ್ಪಡುವ ಶಿಥಿಲಗೊಂಡಿರುವ ಬಾವಿಗಳನ್ನು ಸಂಕ್ರಮಣದ ಸಮಯದಲ್ಲಿ ಪುರಸಭೆಯವರು ಸ್ವಚ್ಛಮಾಡಿ ಹೆಚ್ಚಿನ ನೀರು ಬಿಟ್ಟು ಸ್ನಾನ ಮಾಡಲು ಅನುಕೂಲ ಮಾಡಿಕೊಡುತ್ತಿದ್ದಾರೆ.

# ಪಂಚಮಸಾಲಿ ಸಮಾಜದ ಮಹಿಳೆಯರಿಗೆ ಸನ್ಮಾನ



**■ವಿಜಯಸಾಕ್ಷಿ ಸುದ್ದಿ, ಗದಗ**

2024-25ನೇ ಸಾಲಿನ ಚೇಂಬರ್ ಆಫ್ ಕಾಮರ್ಸ್ ಮಹಿಳಾ ಘಟಕದ ನೂತನ ಕಾರ್ಯದರ್ಶಿ ಜ್ಯೋತಿ ದಾನಪ್ಪಗೌಡರ ಹಾಗೂ ಖಜಾಂಚಿ ಸುಜಾತಾ ಗುಡಿಮನಿ ಅವರನ್ನು ಪಂಚಮಸಾಲಿ ಸಮಾಜದ ಮಹಿಳಾ ಘಟಕದಿಂದ ಸನ್ಮಾನಿಸಲಾಯಿತು.

ಪಂಚಮಸಾಲಿ ಮಹಿಳಾ ಸಮಾಜದ ಅಧ್ಯಕ್ಷೆ ಜಯಶ್ರೀ ಉಗಲಾಟದ ಮಾತನಾಡಿ, ನಮ್ಮ ಸಮಾಜದ ಮಹಿಳೆಯರು ಎಲ್ಲ ಕ್ಷೇತ್ರದಲ್ಲೂ ಮಿಂಚಲಿ ಎಂದು ಹಾರೈಸಿದರು.

ಕಾರ್ಯದರ್ಶಿ ಶಿವಲೀಲಾ ಅಕ್ಕಿ ಸ್ವಾಗತಿಸಿದರು. ಖಜಾಂಚಿ ರೇಣುಕಾ ಅಮಾತ್ಯ ಪರಿಚಯಿಸಿದರು. ಗೌರವ ಕಾರ್ಯದರ್ಶಿ ಶಾಂತಾ ಮುಂದಿನಮನಿ ಕಾರ್ಯಕ್ರಮ ನಿರೂಪಿಸಿದರು. ಸುಮಾ ಪಾಟೀಲ ವಂದಿಸಿದರು.

ಲತಾ ಭರಮಗೌಡರ, ಶಶಿಕಲಾ ಮಾಲಿಪಾಟೀಲ, ಮಾಧುರಿ ಮಾಳೆಕೊಪ್ಪ, ವಿದ್ಯಾ ಗಂಜಿಹಾಳ, ಮಂಜುಳಾ ತಂಗೋಡಿ, ಗಂಗಾ ತಂಗೋಡಿ, ಮಾಲತಿ ಗೋಲಪ್ಪನವರ, ಉಮಾ ಓಜನಳ್ಳಿ, ಅನ್ನಕ್ಕಾ ಮಾಡಲಗೇರಿ, ಈರಮ್ಮಾ ಮಾಡಲಗೇರಿ, ಸುಷ್ಮಾ ಸಂಕಣ್ಣವರ, ಪ್ರಭಾವತಿ ಬಿನ್ನಾಳ ಮುಂತಾದವರು ಉಪಸ್ಥಿತರಿದ್ದರು.

# ದಿ. ರಾಮಕೃಷ್ಣ ಹೆಗಡೆ ಮೌಲ್ಯಾಧಾರಿತ ರಾಜಕಾರಣಿ



**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**


ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿಯವರು ಮಂಗಳವಾರ ಮಾಜಿ ಮುಖ್ಯಮಂತ್ರಿ ದಿ. ರಾಮಕೃಷ್ಣ ಹೆಗಡೆಯವರ ಪತ್ನಿ ಶಕುಂತಲಾ ಹೆಗಡೆಯವರನ್ನು ಬೆಂಗಳೂರಿನ ಸದಾಶಿವನಗರದಲ್ಲಿರುವ ಕೃತಿಕಾ ನಿವಾಸದಲ್ಲಿ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು.

ಈ ಸಂದರ್ಭದಲ್ಲಿ ರಾಮಕೃಷ್ಣ ಹೆಗಡೆಯವರ ಕೊಡುಗೆಗಳನ್ನು ಸಭಾಪತಿ ಬಸವರಾಜ ಹೊರಟ್ಟಿ ಸ್ಮರಿಸಿದರು. ಮೌಲ್ಯಾಧಾರಿತ ರಾಜಕಾರಣಿಯಾಗಿದ್ದ ಹೆಗಡೆಯವರ ಬದುಕು ಹಾಗೂ ಸಾರ್ವಜನಿಕ ಸೇವೆ ಇಂದಿಗೂ ಜನಮಾನಸದಲ್ಲಿ ಹಚ್ಚಹಸಿರಾಗಿದೆ. ರಾಜ್ಯದ ಬಡ ಜನತೆಯ ಬದುಕು ಹಸನಾಗಿಸಲು ಅವರು ಜಾರಿಗೆ ತಂದಿದ್ದ ವಿಧವಾ ವೇತನ, ವೃದ್ಧಾಪ್ಯ ವೇತನ, ಬಸ್‌ಪಾಸ್ ಸೌಲಭ್ಯ, ಪಂಚಾಯತ್ ರಾಜ್ ವ್ಯವಸ್ಥೆ, ಲೋಕಾಯುಕ್ತ ಸೇರಿದಂತೆ ಹತ್ತು ಹಲವು ಜನಪರ ಯೋಜನೆಗಳ ಮೂಲಕ ರಾಜ್ಯದ ಮನೆ ಮಾತಾಗಿದ್ದರು.

ಕಲುಷಿತ ರಾಜಕಾರಣದ ಶುದ್ಧತೆಗಾಗಿ ಪಣತೊಟ್ಟು ಹೊಸ ರಾಜಕೀಯ ಸಂಸ್ಕೃತಿಯನ್ನು ಹುಟ್ಟು ಹಾಕಿದ ಧೀಮಂತ ನಾಯಕ. ರಾಜಕಾರಣದಲ್ಲಿ ಸಂಸ್ಕಾರ, ಪದಬಳಕೆ ಹಾಗೂ ಪರಸ್ಪರ ಗೌರವದಂತಹ ಸಾರ್ವಕಾಲಿಕ ಮೌಲ್ಯಗಳುಳ್ಳ ವಿಚಾರಗಳನ್ನು ಹೆಗಡೆಯವರು ಪ್ರತಿಪಾದಿಸಿದ್ದರು. ಅವರ ಜಾತ್ಯಾತೀತ ಮನೋಭಾವ, ಮೌಲ್ಯ ಸಿದ್ಧಾಂತಗಳ ಅನುಷ್ಠಾನ, ಜನಪರ ಕಾಳಜಿ, ಸರಳತೆ, ಶುದ್ಧ ಸಚ್ಚಾರಿತ್ರ್ಯ ನಡವಳಿಕೆ ಇನ್ನೂ ಮುಂತಾದ ಉದಾತ್ತ ಗುಣಗಳು ಇಂದಿನ ಯುವ ರಾಜಕಾರಣಿಗಳಿಗೆ ಅನುಕರಣೀಯ ಆದರ್ಶಗಳಾಗಿವೆ ಎಂದು ಬಸವರಾಜ ಹೊರಟ್ಟಿಯವರು ಬಣ್ಣಿಸಿದರು.

## ಪತ್ರಿಕಾಗೋಷ್ಠಿಯಲ್ಲಿ ಮನದಿಂಗಿತ ವ್ಯಕ್ತಪಡಿಸಿದ ಡಾ. ಶೇಖರ ಡಿ.ಸಜ್ಜನರ

# ಹಾವೇರಿ ಲೋಕಸಭಾ ಕ್ಷೇತ್ರಕ್ಕೆ ನಾನೂ ಆಕಾಂಕ್ಷಿ




ಈ ಹಿಂದೆ ಮೂರೂ ಅವಧಿಗಳು ಬಿಜೆಪಿ ಸಂಸದರೆ ಅಧಿಕಾರದಲ್ಲಿದ್ದರು. ಹೀಗಿದ್ದರೂ ಗದಗ ಜಿಲ್ಲೆಯಲ್ಲಿ ಆಗಬೇಕಾದಷ್ಟು ಅಭಿವೃದ್ಧಿಯಾಗಿಲ್ಲ. ನ್ಯಾಯವಾಗಿ ದೊರಕಬೇಕಾದ ಸೌಲಭ್ಯಗಳು ದೊರಕದೆ ಬೇರೆಯವರ ಪಾಲಾದವಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಡಾ.ಸಜ್ಜನರ, ಇದರಲ್ಲಿ ಏನೇನು ತಾಂತ್ರಿಕ ತೊಂದರೆಗಳಿದ್ದವೋ ಗೊತ್ತಿಲ್ಲ. ಆದರೆ ನಾನು ಸಂಸದನಾದರೆ ಗದಗ ಮತ್ತು ಹಾವೇರಿ ಎರಡೂ ಜಿಲ್ಲೆಗಳ ಸಮಗ್ರ ಅಭಿವೃದ್ಧಿಗೆ ಕಂಕಣಬದ್ಧನಾಗಿ ಕಾರ್ಯ ನಿರ್ವಹಿಸುತ್ತೇನೆ. ಅದಕ್ಕೆ ಪಕ್ಷ ಅವಕಾಶ ನೀಡಬೇಕು, ಮತದಾರ ಪ್ರಭುಗಳು ಆಶೀರ್ವದಿಸಬೇಕೆಂದು ಡಾ. ಸಜ್ಜನರ ಹೇಳಿದರು.

**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ನಾನು ಹಾವೇರಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಇಚ್ಛಿಸಿದ್ದು, ನಾನೂ ಒಬ್ಬ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದೇನೆ ಎಂದು ಡಾ. ಶೇಖರ ಡಿ.ಸಜ್ಜನರ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಮಂಗಳವಾರ ಈ ಕುರಿತು ವಿವರಗಳನ್ನು ನೀಡಲು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಹಾವೇರಿ ಲೋಕಸಭಾ ಕ್ಷೇತ್ರವು ಗದಗ ಮತ್ತು ಹಾವೇರಿ ಜಿಲ್ಲೆಯನ್ನೊಳಗೊಂಡಿದ್ದು, ಈಗಾಗಲೇ ಹಾವೇರಿ ಜಿಲ್ಲೆಯವರಿಗೆ ಮೂರು ಬಾರಿ ಅವಕಾಶ ದೊರಕಿದೆ. ಈಗ ಬದಲಾದ ಸನ್ನಿವೇಶದಲ್ಲಿ ನಾನು ಈ ಕ್ಷೇತ್ರದಿಂದ ಸ್ಪರ್ಧಿಸಲು ಉತ್ಸುಕನಾಗಿದ್ದೇನೆ. ನನ್ನ ಸಾಮಾಜಿಕ, ವೈದ್ಯಕೀಯ ಸೇವೆ ಮತ್ತು ಸನ್ನಡತೆಯನ್ನು ಮನಗಂಡಿರುವ ಬಿಜೆಪಿ ಹೈಕಮಾಂಡ್ ಈ ಸಾರೆ ನನಗೆ ಈ ಕ್ಷೇತ್ರದಲ್ಲಿ ಟಿಕೆಟ್ ನೀಡುವ ಸಂಪೂರ್ಣ ವಿಶ್ವಾಸವಿದೆ ಎಂದು ಹೇಳಿದರು.

ಈ ಸಾರೆ ಪಕ್ಷವು ನನಗೊಂದು ಅವಕಾಶ ನೀಡಿದರೆ ಜನಸೇವೆಗೆ ನನ್ನ ಜೀವನ ಮತ್ತು ಸಮಯವನ್ನು ಮುಡುಪಾಗಿಡುತ್ತೇನೆ. ವೈದ್ಯಕೀಯ, ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿನ ನನ್ನ ಸಾಧನೆಯನ್ನು, ಬಿಜೆಪಿ ಪಕ್ಷಕ್ಕೆ ನಾನು ಈವರೆಗೆ ಸಲ್ಲಿಸಿರುವ ಸೇವೆಯನ್ನು ಗಮನಿಸಿ ಪಕ್ಷವು ಖಂಡಿತವಾಗಿಯೂ ನನಗೊಂದು ಅವಕಾಶ ನೀಡಿ ಹಾವೇರಿ ಲೋಕಸಭೆಗೆ ಟಿಕೆಟ್ ನೀಡುತ್ತದೆ ಎನ್ನುವ ಬಲವಾದ ಭರವಸೆ ನನಗಿದೆ ಎಂದರು.

2011-16ರ ಅವಧಿಯಲ್ಲಿ ರಾಜ್ಯ ಮಾಹಿತಿ ಆಯೋಗದ ಆಯುಕ್ತನಾಗಿ ರಾಜ್ಯದ ಜನತೆಯ ಸೇವೆ ಮಾಡುವ ಅವಕಾಶ ದೊರಕಿತ್ತು. ಆ ಸಮಯದಲ್ಲಿ ಸುಮಾರು 30 ಸಾವಿರ ಅರ್ಜಿಗಳನ್ನು ವಿಲೇವಾರಿ ಮಾಡಿದ ತೃಪ್ತಿ ನನಗಿದೆ. ಮೋದಿಯವರ ಕನಸಿನ ವಿಕಸಿತ ಸಂಕಲ್ಪ ಯಾತ್ರೆಯಲ್ಲಿ ಪಾಲ್ಗೊಂಡು ಮತಕ್ಷೇತ್ರದ ಜನತೆಗೆ ಇನ್ನಷ್ಟು ಹತ್ತಿರವಾಗಿದ್ದೇನೆ. ಎಲ್ಲರೂ ಪಕ್ಷ ಭೇದ ಮರೆತು ಮೋದಿಯವರನ್ನು ಬೆಂಬಲಿಸಿಸೋಣ ಎಂದರು.

ಡಾ. ಆರ್.ಕೆ. ಗಚ್ಚಿನಮಠ ಮಾತನಾಡಿ, ಡಾ. ಶೇಖರ ಸಜ್ಜನರ ದೇಶದ ಏಳಿಗೆಯ ಬಗ್ಗೆ ಅನೇಕ ಕನಸುಗಳನ್ನು ಇರಿಸಿಕೊಂಡಿದ್ದಾರೆ. ಅವರಿಗೊಂದು ಅವಕಾಶ ಸಿಕ್ಕರೆ ಖಂಡಿತ ಅವರು ಅದನ್ನು ಜನತೆಗಾಗಿಯೆ ಬಳಸಿಕೊಳ್ಳುತ್ತಾರೆ. ಡಾ. ಸಜ್ಜನರ ಈಗಾಗಲೇ ತಮ್ಮ ಕೌಟುಂಬಿಕ ಜವಾಬ್ದಾರಿಗಳನ್ನೆಲ್ಲ ಸಮರ್ಪಕವಾಗಿ ಪೂರೈಸಿ ವಾನಪ್ರಸ್ಥಾನದಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ ಹಾವೇರಿ ಲೋಕಸಭಾ ಕ್ಷೇತ್ರಕ್ಕೆ ಡಾ. ಸಜ್ಜನರ ಸೂಕ್ತ ವ್ಯಕ್ತಿ ಎಂಬುದು ತಮ್ಮ ಅಭಿಪ್ರಾಯ ಎಂದರು.

ಡಾ. ಎನ್.ಬಿ. ಕುರಿ ಮಾತನಾಡಿ, ಡಾ. ಸಜ್ಜನರ ಈ ಭಾಗದಲ್ಲಿ ಅಷ್ಟೇ ಅಲ್ಲದೆ ಹಾವೇರಿ ಜಿಲ್ಲೆಯಲ್ಲಿಯೂ ಸಹ ಜನಪ್ರಿಯತೆ ಪಡೆದ ವೈದ್ಯ ಮತ್ತು ಸಾಮಾಜಿಕ ಸೇವಕರಾಗಿದ್ದಾರೆ. ಅವರಿಗೆ ಅವಕಾಶ ದೊರೆತ-ರೆ ಅವರೊಂದು ಶಕ್ತಿಯಾಗಿ ಮತದಾರರ ಸೇವೆ ಮಾಡುತ್ತಾರೆ ಎಂದರು.

## ಶ್ರೀ ರಂಭಾಪುರೀಶ್ವರ ಸಾಂಸ್ಕೃತಿಕ ಸೇವಾ ಸಂಘದ ಆಶ್ರಯದಲ್ಲಿ 'ಉಚಿತ ಯೋಗ ಶಿಬಿರ'

# ಯೋಗ ಸಾಧನೆಯಿಂದ ಆರೋಗ್ಯ ಪ್ರಾಪ್ತಿ



ಬೆಂಗಳೂರಿನ ಗ್ಲೋಬಲ್ ಯೋಗ ಸಮಿತಿ ಅಧ್ಯಕ್ಷ ಡಾ.ಯೋಗಿ ದೇವರಾಜ ಮಾತನಾಡಿ, ಎಲ್ಲ ಸಂಪತ್ತುಗಳಿಗಿಂತ ಆರೋಗ್ಯ ಸಂಪತ್ತು ದೊಡ್ಡದು. ಸದೃಢ ಶರೀರ ಮತ್ತು ಮಾನಸಿಕ ಸ್ಥಿರತೆಗಾಗಿ ನಿರಂತರ ಯೋಗದಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕೆಂದರು. ಯೋಗ ತರಬೇತಿ ಮುಖ್ಯಸ್ಥರಾದ ಪಂಚಲಿಂಗಪ್ಪ ಕವಲೂರು ಯೋಗ ಪ್ರಾತ್ಯಕ್ಷಿಕೆಯ ಮೂಲಕ ಶಿಬಿರಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು.

**■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ**

ಭಾರತೀಯ ಸಂಸ್ಕೃತಿಯಲ್ಲಿ ಆಧ್ಯಾತ್ಮ ಮತ್ತು ಯೋಗ ಸಾಧನೆಗೆ ಮಹತ್ವದ ಸ್ಥಾನವನ್ನು ಕಲ್ಪಿಸಿದ್ದಾರೆ. ಮಾನಸಿಕ ಶಾಂತಿ, ಸದೃಢ ಶರೀರ ಮತ್ತು ಆರೋಗ್ಯ ಪ್ರಾಪ್ತಿಗಾಗಿ ಯೋಗವನ್ನು ರೂಢಿಸಿಕೊಂಡು ಬಾಳಬೇಕು. ನಿರಂತರ ಯೋಗ ಸಾಧನೆಯಿಂದ ಆರೋಗ್ಯ ಪ್ರಾಪ್ತಿಯಾಗುವುದೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ನಗರದ ಶ್ರೀ ರಂಭಾಪುರೀಶ್ವರ ಸಮುದಾಯ ಭವನದಲ್ಲಿ ಶ್ರೀ ಜಗದ್ಗುರು ರಂಭಾಪುರೀಶ್ವರ ಸಾಂಸ್ಕೃತಿಕ ಸೇವಾ ಸಂಘದ ಆಶ್ರಯದಲ್ಲಿ ಜರುಗಿದ 'ಉಚಿತ ಯೋಗ ಶಿಬಿರ' ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಮಾನಸಿಕ ಒತ್ತಡಗಳಿಂದ ಆರೋಗ್ಯದಲ್ಲಿ ಏರುಪೇರು ಕಾಣುತ್ತೇವೆ. ಹಣ ಗಳಿಕೆಯೊಂದೇ ಜೀವನದ ಗುರಿಯಲ್ಲ. ಅದರೊಂದಿಗೆ ದೈಹಿಕ ಆರೋಗ್ಯ ಉತ್ತಮವಾಗಿರಲು ನಿತ್ಯ ಅರ್ಧ ಗಂಟೆಯಾದರೂ ಯೋಗ-ಧ್ಯಾನದಲ್ಲಿ ತೊಡಗಿಸಿಕೊಂಡರೆ ಉಲ್ಲಸಿತ ಆರೋಗ್ಯ ದೊರಕುವುದರಲ್ಲಿ ಸಂದೇಹವಿಲ್ಲ. ಜಗದ್ಗುರುಗಳ ಜನ್ಮ ನಿಮಿತ್ತ ಮಾಡಿ ಶ್ರೀ ಜಗದ್ಗುರು ರಂಭಾಪುರೀಶ್ವರ ಸಾಂಸ್ಕೃತಿಕ ಸೇವಾ ಸಂಘದಿಂದ ಉಚಿತ ಯೋಗ ಶಿಬಿರ ಪ್ರತಿ ವರುಷ ನಡೆಸಿಕೊಂಡು ಬರುತ್ತಿರುವ ಕಾರ್ಯ ಸ್ತುತ್ಯಾರ್ಹವಾದುದೆಂದರು.

ಬಹಳ ವರುಷಗಳಿಂದ ಕಗ್ಗಂಟಾಗಿದ್ದ ಅಯೋಧ್ಯಾ ರಾಮಭೂಮಿಯ ಸಮಸ್ಯೆಯನ್ನು ಸುಪ್ರೀಂ ಕೋರ್ಟ್ ಸ್ಪಷ್ಟ ನಿರ್ದೇಶನ ನೀಡಿ, ರಾಮ ಜನ್ಮ ಭೂಮಿಯಲ್ಲಿ ಶ್ರೀ ರಾಮ ಮಂದಿರ ನಿರ್ಮಾಣಕ್ಕೆ ಹಸಿರು ನಿಶಾನೆ ತೋರಿಸಿರುವುದನ್ನು ದೇಶವಾಸಿಗಳೆಲ್ಲರೂ ಮೆಚ್ಚಿಕೊಂಡಿದ್ದಾರೆ. ರಾಮಮಂದಿರ ಸತ್ಕಾರ್ಯದಲ್ಲಿ ಕೆಲವು ಮಠಾಧೀಶರು ಅಪಸ್ವರ ಎತ್ತುತ್ತಿರುವುದು ಒಳ್ಳೆಯದಲ್ಲ. ಧರ್ಮ-ದೇವರ ಹೆಸರಿನಲ್ಲಿ ಯಾರೂ ರಾಜಕೀಯ ಮಾಡಬಾರದು. ಯಾರು ಹೋಗಲಿ, ಬಿಡಲಿ. ಅಯೋಧ್ಯೆಯಲ್ಲಿ ನಿಗದಿಯಾದ ದಿನದಂದು ಶ್ರೀರಾಮ ಮೂರ್ತಿಯ ಪ್ರತಿಷ್ಠಾಪನಾ ಕಾರ್ಯಗಳು ನಡೆಯುತ್ತವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಧಾರವಾಡ ಕೃಷಿ ವಿಶ್ವವಿದ್ಯಾಲಯದ ಡಾ. ಪಿ.ಎಚ್. ಪಾಟೀಲ 2024ರ ದಿನದರ್ಶಿಕೆ ಬಿಡುಗಡೆ ಮಾಡಿ, ದೈನಂದಿನ ಬದುಕಿನಲ್ಲಿ ಯೋಗವನ್ನು ರೂಢಿಸಿಕೊಂಡು ಬರುವ ಅಗತ್ಯವಿದೆ. ಯೋಗದಿಂದ ಮನಸ್ಸು, ಬುದ್ಧಿ ಪರಿಶುದ್ಧಗೊಂಡು ಆರೋಗ್ಯವಂತರಾಗಿ ಬಾಳಲು ಸಾಧ್ಯವಾಗುವುದು ಎಂದರು.

ಸಂಘದ ಅಧ್ಯಕ್ಷ ವಿಶ್ವನಾಥ ಹಿರೇಗೌಡರ ಸರ್ವರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶರಣಪ್ಪ ಕೊಟ್ಟಗಿ, ವಿ.ಜಿ. ಪಾಟೀಲ, ಆರ್.ಎಂ. ಹಿರೇಮಠ, ಬಸವರಾಜ ಸುಳ್ಳದ ಮೊದಲಾದ ಗಣ್ಯರು ಉಪಸ್ಥಿತರಿದ್ದರು. ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲ ಸಾಧಕರಿಂದ ವೇದಘೋಷ, ಶಿವು ಹಿರೇಮಠ ಇವರಿಂದ ಪ್ರಾರ್ಥನೆ ಗೀತೆ ಜರುಗಿತು. ಜೀವಿ ಕಲಾ ಬಳಗದ ಜಿ.ವಿ. ಹಿರೇಮಠ ನಿರೂಪಿಸಿದರು.

# ನೌಕರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷರಾಗಿ ಆಯ್ಕೆ

**■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**



ಶಿರಹಟ್ಟಿ ತಾಲೂಕಾ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಅಧ್ಯಕ್ಷ ಶರಣಬಸವ. ಕೆ. ಪಾಟೀಲ ಅವರು ರಾಜ್ಯ ವೀರಶೈವ ಲಿಂಗಾಯತ (ಕೆವಿಎಲ್) ಸರಕಾರಿ ನೌಕರರ ಕ್ಷೇವಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಇವರ ಆಯ್ಕೆಗೆ ತಾಲೂಕಾ ಸರಕಾರಿ ನೌಕರರು ಹಾಗೂ ಶಿಕ್ಷಕರ ಬಳಗ ಅಭಿನಂದನೆ ಸಲ್ಲಿಸಿದೆ.

# 'ಕೂಸಿನ ಮನೆ'ಯಿಂದ ಉದ್ಯೋಗಾವಕಾಶ

▶▶ಮೊದಲನೇ ಪುಟದಿಂದ

ಗ್ರಾಮೀಣ ಪ್ರದೇಶದ ಮಕ್ಕಳ ಹಾಗೂ ಮಹಿಳೆಯರ ಶ್ರಯೋಭಿವೃದ್ಧಿಯ ಉದ್ದೇಶದಿಂದ ರಾಜ್ಯ ಸರ್ಕಾರ ಕೂಸಿನ ಮನೆ ಕಾರ್ಯಕ್ರಮವನ್ನು ಜಾರಿಗೊಳಿಸಿದೆ. ಅಂತೆಯೇ ತಾಲೂಕಿನಲ್ಲಿ ಏಳು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೂಸಿನ ಮನೆ ಆರಂಭಿಸಿ ಅದರ ಆರೈಕೆದಾರರಿಗೆ ಮೂರು ದಿನಗಳ ತರಬೇತಿ ನೀಡುತ್ತಿರುವುದು ಸಂತೋಷದ ವಿಚಾರವೆಂದರು.

ಈ ಸಂದರ್ಭದಲ್ಲಿ ಸಹಾಯಕ ನಿರ್ದೇಶಕ (ಗ್ರಾಮೀಣ ಉದ್ಯೋಗ) ಸಂತೋಷಕುಮಾರ್ ಪಾಟೀಲ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಆನಂದ ಭೋವಿ, ತರಬೇತುದಾರರಾದ ಜಿಲ್ಲಾ ಐಇಸಿ ಸಂಯೋಜಕ ವೀರಭದ್ರಪ್ಪ ಸಜ್ಜನ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಹಿರಿಯ ಮೇಲ್ವಿಚಾರಕರಾದ ಮಂಜುಳಾ ಗುರಾಣಿ, ಶಕುಂತಲಾ ಗಣಿ ಸೇರಿದಂತೆ ನರಗುಂದ, ಚಿಕ್ಕನರಗುಂದ, ಹುಣಶಿಕಟ್ಟಿ, ಕನಕಿಕೊಪ್ಪ, ಸುರಕೋಡ, ರೆಡ್ಡೆರನಾಗನೂರು, ಕೊಣ್ಣೂರು ಹಾಗೂ ಹಿರೇಕೊಪ್ಪ ಗ್ರಾ.ಪಂ ವ್ಯಾಪ್ತಿಯ ಕೂಸಿನ ಮನೆ ಆರೈಕೆದಾರರು ಭಾಗವಹಿದ್ದರು. ತಾ.ಪಂ ಸಿಬ್ಬಂದಿ ಪ್ರದೀಪ ಕದಂಬ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

## ಯಳಂದೂರು ಬಸವಲಿಂಗ ಮಹಾಸ್ವಾಮಿಗಳವರ 130ನೇ ಪುಣ್ಯ ಸ್ಮರಣೋತ್ಸವ

# ಶ್ರದ್ಧಾಭಾವವೇ ಸಂಕಲ್ಪ ಸಾಧನೆಗೆ ಮಾರ್ಗ



ವೇದಿಕೆಯಲ್ಲಿ ಗದಗ ಜಿಲ್ಲಾ ಯೋಗ ಒಕ್ಕೂಟದ ಅಧ್ಯಕ್ಷ ಎಂ.ಎಸ್. ಶಿರಿಯಣ್ಣವರ, ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರದ ಅಧ್ಯಕ್ಷೆ ಜಯಶ್ರೀ ವಸ್ತ್ರದ, ಅತಿಥಿಗಳಾದ ಮಂಗಲಾ ಚೌಕೀಮಠ, ಡಾ. ಎಸ್.ಕೆ. ನಾಲತ್ವಾಡಮಠ ಉಪಸ್ಥಿತರಿದ್ದರು. ಎಂ.ಎಸ್. ಶಿರಿಯಣ್ಣವರ ಯೋಗ ಪಾಠಶಾಲೆ ನಡೆದು ಬಂದ ದಾರಿ ವಿವರಿಸಿದರೆ, ಮಂಗಳಾ ಚೌಕಿಮಠ ಆರೋಗ್ಯವಂತ ಮಕ್ಕಳಿಂದ ಸ್ವಸ್ಥ ಸಮಾಜ ನಿರ್ಮಾಣದ ಕುರಿತು ತಿಳಿಸಿದರು.

**■ವಿಜಯಸಾಕ್ಷಿ ಸುದ್ದಿ, ಗದಗ**

ತಮಗೆ ಬಂದ ಕಷ್ಟಗಳ ನಿವಾರಣೆಗಾಗಿ ಸಂಕಲ್ಪ ಮಾಡಿಕೊಂಡು ಹಲವರು ದೇವರ ಮೊರೆ ಹೋಗುವುದು, ಹರಕೆ ಹೊರುವುದು ಮುಂತಾದ ಆಚರಣೆಗಳನ್ನು ಆಚರಿಸುತ್ತಾರೆ. ಇವುಗಳನ್ನು ಸಾಂಪ್ರದಾಯಿಕವಾಗಿ ಆಚರಿಸದೇ ನಂಬಿಕೆ, ಭಕ್ತಿ, ವಿಶ್ವಾಸದಿಂದ ಆಚರಿಸಿದರೆ ಮಾತ್ರ ಸಂಕಲ್ಪಕ್ಕೆ ಸಫಲತೆ ದೊರೆಯುತ್ತದೆ ಎಂದು ಸೀಬರ್ಡ್ ನೌಕಾನೆಲೆಯ ತಾಂತ್ರಿಕ ನಿರ್ದೇಶಕ ಶ್ರೀಕಂಠ ಚೌಕಿಮಠ ಅಭಿಪ್ರಾಯಪಟ್ಟರು.

ಇಲ್ಲಿನ ಎಸ್‌ವಾಯ್‌ಬಿಎಂಎಸ್ ಯೋಗಪಾಠಶಾಲೆಯ ಬಸವ ಯೋಗಕೇಂದ್ರ ಗದಗ ಮತ್ತು ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರ ಸಿದ್ಧಲಿಂಗ ನಗರ ಇವರ ಸಹಯೋಗದೊಂದಿಗೆ ಸಿದ್ಧಲಿಂಗ ನಗರದಲ್ಲಿನ ಬಸವ ಯೋಗ ಮಂದಿರದಲ್ಲಿ ನಡೆದ ಶ್ರೀಮನ್ನಿರಂಜನ ಯಳಂದೂರು ಬಸವಲಿಂಗ ಮಹಾಸ್ವಾಮಿಗಳವರ 130ನೇ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.


ಸಮಾಜೋದ್ಧಾರಕ್ಕಾಗಿ ಸಿಂಧಗಿ ಶಾಂತವೀರ ಪಟ್ಟಾಧ್ಯಕ್ಷರನ್ನು ಮತ್ತು ಪಂಚಾಕ್ಷರಿ ಗವಾಯಿಗಳವರನ್ನು ತಯಾರುಗೊಳಿಸಿದವರು ಹಾನಗಲ್ ಕುಮಾರ ಶಿವಯೋಗಿಗಳು. ಇವರ ಆಧ್ಯಾತ್ಮ ಮತ್ತು ಯೋಗ ಗುರುಗಳು ಯಳಂದೂರು ಬಸವಲಿಂಗ ಮಹಾಸ್ವಾಮಿಗಳು. ಇವರ ನಾಮೆಯಲ್ಲಿರುವ ಯೋಗ ಪಾಠಶಾಲೆಯು ಅವರ ಸ್ಮರಣೋತ್ಸವ ಆಚರಿಸುತ್ತಿರುವುದು ಶ್ಲಾಘನೀಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಲೊಯೋಲಾ ಪ್ರೌಢಶಾಲೆಯ ನಿವೃತ್ತ ಶಿಕ್ಷಕ ಗುರುಪಾದ ಕಟ್ಟಿಮನಿ ಮಾತನಾಡಿ, ಹೆಚ್ಚುತ್ತಿರುವ ಮನೋದೈಹಿಕ ಕಾಯಿಲೆಗಳ ನಿವಾರಣೆಗೆ ಯೋಗ ಮಹತ್ವದ್ದಾಗಿದೆ. ಈ ಯೋಗ ಶಿಕ್ಷಣವನ್ನು ನಿತ್ಯ ನಿರಂತರವಾಗಿ ಆಸಕ್ತ ಜನತೆಗೆ ಉಚಿತವಾಗಿ ನೀಡುತ್ತಿರುವುದು ಮಹಾನ್ ಕಾರ್ಯ. ಈ ಸೇವಾ ಕಾರ್ಯದಲ್ಲಿ ನಾವೂ ಕೂಡ ಸಕ್ರಿಯವಾಗಿ ಪಾಲ್ಗೊಂಡು ಆರೋಗ್ಯಯುತ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸೋಣ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಂಗಳಾ ಮತ್ತು ಶ್ರೀಕಂಠ ಚೌಕೀಮಠ ದಂಪತಿಗಳನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಯೋಗಾಸನ ಪ್ರದರ್ಶನ ನೀಡಿದ ವಿದ್ಯಾರ್ಥಿಗಳಿಗೆ ಗೌರವ ನೀಡಿ ಪ್ರೋತ್ಸಾಹಿಸಲಾಯಿತು. ಕಾರ್ಯಕ್ರಮದಲ್ಲಿ ವಿ.ಪಿ. ಸವಡಿ, ವೀರಣ್ಣ ಗೋಟಡಕಿ, ಬಸನಗೌಡ ಪಾಟೀಲ, ವಿಜಯಾ ಚನ್ನಶೆಟ್ಟಿ, ಚೈತ್ರಾ ಹದ್ದಣ್ಣವರ, ಸಂಗೀತ ಮಡಿವಾಳರ, ಸಂಜನಾ ಸಜ್ಜನರ, ಲಲಿತಾ ಅಣ್ಣಿಗೇರಿ, ಮಹಾದೇವಿ ಚರಂತಿಮಠ, ಪಾರ್ವತಿ ಭೂಮಾ, ಕಸ್ತೂರಿ ಮರಿಗೌಡರ ಮುಂತಾದವರು ಉಪಸ್ಥಿತರಿದ್ದರು.

ವಿಜಯಲಕ್ಷ್ಮೀ ಆನೆಹೊಸೂರ ಪ್ರಾರ್ಥನೆಗೈದರು. ಡಾ. ಎಂ.ವಿ. ಐಹೊಳ್ಳಿ ಸ್ವಾಗತಿಸಿದರು. ಬಸವ ಯೋಗ ಕೇಂದ್ರದ ಪ್ರಾಚಾರ್ಯ ಕೆ.ಎಸ್. ಪಲ್ಲೇದ ಪ್ರಾಸ್ತಾವಿಕವಾಗಿ ಮಾತನಾಡಿ, ಕಾರ್ಯಕ್ರಮ ನಿರೂಪಿಸಿದರು. ಕೊನೆಯಲ್ಲಿ ಗೌರಿ ಜಿರಂಕಳಿ ವಚನ ಮಂಗಲ ಹೇಳಿದರು. ಅರುಣಾ ಇಂಗಳಳ್ಳಿ ಮಕರ ಸಂಕ್ರಾಂತಿ ಶುಭಾಶಯ ತಿಳಿಸಿ ಸಿಹಿ ವಿತರಿಸಿದರು.


# ನಿಧನ ವಾರ್ತೆ



**ಕಳಕವ್ವ ಸಂಗಪ್ಪ ಬುಳ್ಳಾ**

ನರೇಗಲ್ಲ, ಸಮೀಪದ ಜಕ್ಕಲಿ ಗ್ರಾಮದ ನಿವಾಸಿ ಕಳಕವ್ವ ಸಂಗಪ್ಪ ಬುಳ್ಳಾ (71) ಮಂಗಳವಾರ ನಿಧನರಾದರು.

ಮೃತರಿಗೆ ಇಬ್ಬರು ಪುತ್ರರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವಿದೆ.



**ವೀರಭದ್ರಪ್ಪ ವೀರಪ್ಪ ಮೆಣಸಗಿ**

ನರೇಗಲ್ಲ, ಸಮೀಪದ ಜಕ್ಕಲಿ ಗ್ರಾಮದ ಕಲಾವಿದ ವೀರಭದ್ರಪ್ಪ ವೀರಪ್ಪ ಮೆಣಸಗಿ (69) ಮಂಗಳವಾರ ನಿಧನರಾದರು. ಮೃತರಿಗೆ ಪತ್ನಿ, ಪುತ್ರ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗದವರು ಇದ್ದಾರೆ.

## ವೀರಶೈವ ಲಿಂಗಾಯತ ಮಹಾಸಭಾದಿಂದ ಪ್ರತಿಭಾ ಪುರಸ್ಕಾರ

■ವಿಜಯಸಾಕ್ಷಿ ಸುದ್ದಿ, ಗದಗ

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಗದಗ ಜಿಲ್ಲಾ ಘಟಕವು ಜ.20ರಂದು ಸಂಜೆ 4 ಗಂಟೆಗೆ ಗದುಗಿನ ಪಂಚಾಚಾರ್ಯ ಮಾಂಗಲ್ಯ ಮಂದಿರದಲ್ಲಿ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಹಮ್ಮಿಕೊಂಡಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಶಾಸಕರಾದ ಸಿ.ಸಿ. ಪಾಟೀಲ, ಜಿ.ಎಸ್. ಪಾಟೀಲ, ವಿ.ಪ ಸದಸ್ಯ ಎಸ್.ವ್ಹಿ. ಸಂಕನೂರ ಆಗಮಿಸುವರು. ಅಧ್ಯಕ್ಷತೆಯನ್ನು ಮಹಾಸಭಾದ ಗದಗ ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ಕೊರ್ಲಹಳ್ಳಿ ವಹಿಸುವರು.

ಜಿಲ್ಲಾ ಘಟಕದ ಉಪಾಧ್ಯಕ್ಷ ಎಸ್.ಬಿ. ಕರಿಭರಮಗೌಡ್ರ, ಬಿ.ಬಿ. ಅಸೂಟಿ, ಸದಾಶಿವ ಮದರಿಮಠ, ಸುರೇಖಾ ಪಿಳ್ಳೆ, ಪ್ರಧಾನ ಕಾರ್ಯದರ್ಶಿ ಎಂ.ಎಂ. ಬಡ್ನಿ, ಕಾರ್ಯದರ್ಶಿಗಳಾದ ಸಿದ್ದು ಜೀವನಗೌಡ್ರ, ಚನ್ನಯ್ಯ ಸಂಗಳಮಠ, ಪಿ.ಟಿ. ನಾರಾಯಣಪೂರ, ಮಂಜುಳಾ ರೇವಡಿ, ಕೋಶಾಧ್ಯಕ್ಷ ಎಂ.ಎಸ್. ಮಲ್ಲಾಪೂರ ಸೇರಿದಂತೆ ಕಾರ್ಯಕಾರಿ ಮಂಡಳಿ ಸದಸ್ಯರು ಹಾಗೂ ತಾಲೂಕು ಘಟಕಗಳ ಸಿದ್ದು ಪಲ್ಲೇದ, ರಾಜಣ್ಣ ಹೂಲಿ, ಶಂಕ್ರಪ್ಪ ಕುಕನೂರ, ಯಲ್ಲಪ್ಪಗೌಡ ನಾಯ್ಕರ ಉಪಸ್ಥಿತರಿರುವರು.

ಪ್ರತಿಭಾ ಪುರಸ್ಕಾರ ಪಡೆಯುವ ವಿದ್ಯಾರ್ಥಿಗಳು 10 ನಿಮಿಷ ಮೊದಲೇ ಉಪಸ್ಥಿತರಿರಬೇಕು. ಸಮಾಜಬಾಂಧವರು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ಕಾರ್ಯದರ್ಶಿ ಸಿದ್ದು ಜೀವನಗೌಡ್ರ ವಿನಂತಿಸಿದ್ದಾರೆ.

## ಹಿಟ್ ಅಂಡ್ ರನ್ ಕಾನೂನು ವಿರೋಧಿಸಿ ಮುಷ್ಕರ: ಟ್ರಕ್ ಚಾಲಕರಲ್ಲೇ ಮಿಶ್ರ ಪ್ರತಿಕ್ರಿಯೆ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಕೇಂದ್ರ ಸರ್ಕಾರ ಜಾರಿ ತರಲು ನಿರ್ಧರಿಸಿರುವ ನೂತನ ಹಿಟ್ ಅಂಡ್ ರನ್ ಕಾನೂನು ವಿರೋಧಿಸಿ ಬುಧವಾರ ಮಧ್ಯರಾತ್ರಿಯಿಂದ ಕರೆ ನೀಡಲಾಗಿರುವ ಮುಷ್ಕರಕ್ಕೆ ಟ್ರಕ್ ಚಾಲಕರಿಂದಲೇ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಕರ್ನಾಟಕ ರಾಜ್ಯ ಲಾರಿ ಮಾಲೀಕರ ಸಂಘದ (ಎಫ್‌ಕೆಎಲ್‌ಒಎ) ಅಡಿಯಲ್ಲಿ ಟ್ರಕ್ಕರ್‌ಗಳ ಒಂದು ವಿಭಾಗವು ಭಾರತೀಯ ನ್ಯಾಯ ಸಂಹಿತೆಯಡಿಯಲ್ಲಿ ಹೊಸ ದಂಡದ ಕಾನೂನಿನ ವಿರುದ್ಧ ಬುಧವಾರ ಮಧ್ಯರಾತ್ರಿಯಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದೆ.

### ಶಿರಹಟ್ಟಿ ತಾ.ಪಂ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಶಾಸಕ ಡಾ. ಚಂದ್ರು ಲಮಾಣಿ ಆಕ್ರೋಶ

# 115 ಕೋಟಿ ವ್ಯಯಿಸಿದ್ದರೂ ಕೆರೆಗಳಲ್ಲಿ ಹನಿ ನೀರಿಲ್ಲ!

■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ




ತಾಲೂಕು ವ್ಯಾಪ್ತಿಯಲ್ಲಿ ಕರ್ನಾಟಕ ನೀರಾವರಿ ನಿಗಮ ನಿಯಮಿತ ವತಿಯಿಂದ 20 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಈಗಾಗಲೇ 115 ಕೋಟಿ ರೂ ಪಾವತಿಸಲಾಗಿದೆ. ಆದರೆ, ಯಾವ ಕೆರೆಯಲ್ಲೂ ಹನಿ ನೀರಿಲ್ಲ ಎಂದು ಶಾಸಕ ಡಾ. ಚಂದ್ರು ಲಮಾಣಿ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಅವರು ಬುಧವಾರ ಶಿರಹಟ್ಟಿಯ ತಾ.ಪಂ ಸಭಾಭವನದಲ್ಲಿ ಜರುಗಿದ ತ್ರೈಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಇಲಾಖಾವಾರು ಚರ್ಚೆಯಲ್ಲಿ ಮಾತನಾಡಿದರು.

2018ರಲ್ಲಿಯೇ ಈ ಯೋಜನೆಯು ಕಾರ್ಯಾರಂಭ ಮಾಡಿದೆ. ಈ ಯೋಜನೆಗೆ 137 ಕೋಟಿ ರೂ ಅನುದಾನವಿದ್ದು, ಇದರಲ್ಲಿ ಈಗಾಗಲೇ 115 ಕೋಟಿ ರೂಗಳನ್ನು ಪಾವತಿಸಲಾಗಿದೆ. ಆದರೆ 5-6 ವರ್ಷಗಳಾದರೂ ಇಲ್ಲಿಯವರೆಗೂ ಕೆಲಸ ಪೂರ್ಣಗೊಂಡಿಲ್ಲ. ಕೆಲಸ ಪೂರ್ಣಗೊಳ್ಳದೇ ಶೇ 85 ಬಿಲ್ ಹೇಗೆ ಪಾವತಿಸಿದ್ದೀರಿ? ಈ ಬಗ್ಗೆ ನನಗೂ ಅಧಿಕಾರಿಗಳು ಮಾಹಿತಿ ನೀಡಿಲ್ಲ. ಬೇಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಿ ಸರಕಾರದ ಅನುದಾನವನ್ನು ಬೇಕಾಬಿಟ್ಟಿಯಾಗಿ ವಿನಿಯೋಗಿಸಿದ್ದಾರೆ. ಆದ್ದರಿಂದ ಈ ಕುರಿತು ಥರ್ಡ್ ಪಾರ್ಟಿ ಇನ್ಸ್‌ಪೆಕ್ಷನ್ ನಡೆಸಿ ಇಲಾಖೆಯ ಮೇಲಾಧಿಕಾರಿಗಳಿ ವರದಿ ಸಲ್ಲಿಸಲಾಗುವುದು ಎಂದರು.

ಸಭೆಗೆ ಗೈರು ಉಳಿದ ಕೆಎನ್‌ಎನ್‌ಎಲ್ ಎಕ್ಸಿಕ್ಯುಟಿವ್ ಇಂಜಿನಿಯರ್‌ಗೂ ನೋಟಿಸ್ ಜಾರಿಗೊಳಿಸುವಂತೆ ಸಭೆಯಲ್ಲಿ ಠರಾವನ್ನು ಮಾಡಿಸಲಾಯಿತು. ಸಭೆ ಪ್ರಾರಂಭವಾದಾಗಿನಿಂದಲೂ ಅಧಿಕಾರಿಗಳ ಕಾರ್ಯವೈಖರಿಗೆ ಅಸಮಾಧಾನ ವ್ಯಕ್ತಪಡಿಸಿದ ಶಾಸಕ ಡಾ. ಚಂದ್ರು ಲಮಾಣಿ, ಇಲಾಖೆಗಳಿಗೆ ಮಾಹಿತಿ ಕೇಳಿ 3-4 ತಿಂಗಳು ಗತಿಸಿದರೂ ಮಾಹಿತಿ ನೀಡುತ್ತಿಲ್ಲ. ಕೆಲಸದ ಸಮಯದಲ್ಲಿ ಕಚೇರಿಯಲ್ಲಿ ಇರುವುದಿಲ್ಲ. ಹೀಗಾದರೆ ನಮ್ಮ ಕ್ಷೇತ್ರದ ಜನತೆಯ ಕೆಲಸ ಮಾಡುವವರು ಯಾರು? ನಾನು ಕೂಡಾ ತಾಲೂಕಿನಲ್ಲಿ 4 ವರ್ಷ ಸರಕಾರಿ ಸೇವೆ ಮಾಡಿದ್ದೇನೆ. ನನ್ನಿಂದ ಸಾಧ್ಯವಾದಷ್ಟು ಮಟ್ಟಿಗೆ ಜನತೆಗೆ ಆರೋಗ್ಯದ ವಿಷಯದಲ್ಲಿ ಕಾಳಜಿ ವಹಿಸಿದ್ದಕ್ಕೆ ಇವತ್ತು ನಾನು ಕ್ಷೇತ್ರದ ಶಾಸಕನಾಗಿ ನಿಮ್ಮೆದುರಿಗೆ ಬಂದಿದ್ದೇನೆ. ನಿಮಗೆ ಕೆಲಸ ಮಾಡಲು ಇಷ್ಟವಿಲ್ಲದಿದ್ದರೆ ದಯವಿಟ್ಟು ಬೇರೆಕಡೆಗೆ ವರ್ಗವಾಗಿ ಹೋಗಿ ಎಂದು ಡಾ. ಚಂದ್ರು ಲಮಾಣಿ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಅರಣ್ಯ, ತೋಟಗಾರಿಕೆ, ಕೃಷಿ, ರೇಷ್ಮೆ, ಆಹಾರ, ಪಿಆರ್‌ಇಡಿ, ಪಿಡಬ್ಲ್ಯುಡಿ, ಆರ್‌ಡಬ್ಲ್ಯುಎಸ್ ಇಲಾಖೆ ಹಾಗೂ ನಿರ್ಮಿತಿ ಕೇಂದ್ರಗಳ ಪ್ರಗತಿ ಪರಿಶೀಲನೆ ನಡೆಸಲಾಯಿತು.

ತಹಸೀಲ್ದಾರ ಅನಿಲ ಬಡಿಗೇರ, ತಾ.ಪಂ ಆಡಳಿತಾಧಿಕಾರಿ ಎನ್.ಕೆ. ನಿರ್ಮಲಾ, ಇಓ ಡಾ. ಎನ್.ಎಚ್. ಓಲೇಕಾರ ಹಾಗೂ ತಾಲೂಕಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಸೋಪ್‌ಕಿಟ್ ವಿತರಣೆಯಾಗದಿರುವ ಬಗ್ಗೆ ಪಾಲಕರಿಂದ ದೂರುಗಳು ಕೇಳಿ ಬರುತ್ತಿದ್ದು, ಇದನ್ನು ಸರಿಪಡಿಸುವಂತೆ ಬಿಸಿಎಂ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಶಾಸಕ ಲಮಾಣಿ ಸೂಚನೆ ನೀಡಿದರು. ನವೇಭಾವನೂರ ವಸತಿ ನಿಲಯದಲ್ಲಿ ಹೊರಗುತ್ತಿಗೆ ಶಿಕ್ಷಕರು ಸರಿಯಾಗಿ ಪಾಠವನ್ನು ಮಾಡುತ್ತಿಲ್ಲವೆಂದು ಪಾಲಕರು ಹೇಳುತ್ತಿದ್ದು, ಈ ಬಗ್ಗೆ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ, ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕಲ್ಪಿಸುವಂತೆ ಸಮಾಜ ಕಲ್ಯಾಣಾಧಿಕಾರಿಗೆ ಶಾಸಕ ಲಮಾಣಿ ಸೂಚಿಸಿದರು.

### ಆಟೋ ಚಾಲಕರ ರಾಜ್ಯ ಸಮಾವೇಶದ ಭಿತ್ತಿಪತ್ರ ಬಿಡುಗಡೆಗೊಳಿಸಿದ ಕೃಷ್ಣಗೌಡ ಪಾಟೀಲ

## ಸಮಾವೇಶವು ಯಶಸ್ವಿಯಾಗಿ ಜರುಗಲಿ



■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಆಟೋ ಸಂಘಟನೆಗಳ ಒಕ್ಕೂಟದಿಂದ ನಗರದಲ್ಲಿ ನಡೆಯಲಿರುವ ಆಟೋ ಚಾಲಕರ ರಾಜ್ಯ ಮಟ್ಟದ ಮೊದಲ ಸಮಾವೇಶದ ಭಿತ್ತಿಪತ್ರಗಳನ್ನು ಮತ್ತು ಪ್ರಚಾರ ಸಾಮಗ್ರಿಗಳನ್ನು ಗದಗ ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೃಷ್ಣಗೌಡ ಪಾಟೀಲ ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಅವರು ಮಾತನಾಡಿ, ಆಟೋ ಚಾಲಕರ ಬದುಕಿಗೆ ಭದ್ರ ಬುನಾದಿಯಾಗಲಿರುವ ಸಮಾವೇಶ ಗದಗ ನಗರದಲ್ಲಿ ನಡೆಯುತ್ತಿರುವದು ಹೆಮ್ಮೆಯ ಸಂಗತಿಯಾಗಿದೆ. ಆಟೋ ಚಾಲಕ ವೃತ್ತಿ ಮಾಡುತ್ತ ತಮ್ಮ ಕುಟುಂಬವನ್ನು ಸಲುಹಿತ್ತಿರುವ ಗದುಗಿನ ಆಟೋ ಚಾಲಕರು ರಾಜ್ಯದ ಆಟೋ ಚಾಲಕರ ಬದುಕಿನ ಬಗ್ಗೆ ದೃಢ ನಿರ್ಧಾರ ತೆಗೆದುಕೊಂಡು ಇಡೀ ರಾಜ್ಯದಲ್ಲಿಯೇ ಮೊದಲ ಬಾರಿಗೆ ನಮ್ಮ ಗದಗ ನಗರದಲ್ಲಿ ನಡೆಸಲು ಉದ್ದೇಶಿಸಿರುವ ಈ ಸಮಾವೇಶವು ಯಶಸ್ವಿಯಾಗಲಿ ಎಂದು ಶುಭ ಕೋರಿದರು.

ಯುವ ಮುಖಂಡ ಅರವಿಂದ ಹುಲ್ಲೂರ ಮಾತನಾಡಿ, ಪ್ರಾಮಾಣಿಕತೆಗೆ ಮತ್ತೊಂದು ಹೆಸರೇ ಆಟೋ ಚಾಲಕರು. ತಮ್ಮ ಆಟೋಗಳಲ್ಲಿ ಪ್ರಯಾಣಿಕರು ಮರೆತುಹೋದ ಲಕ್ಷಾಂತರ ರೂ. ಬೆಲೆಬಾಳುವ ಬಂಗಾರದ ಆಭರಣಗಳನ್ನು ಪೊಲೀಸ್ ಇಲಾಖೆಯ ಸಮಕ್ಷಮದಲ್ಲಿ ಸಂಬಂಧಿಸಿದವರಿಗೆ ಒಪ್ಪಿಸಿರುವುದನ್ನು ನೋಡಿದರೆ ಅವರಲ್ಲಿರುವ ಸಾಮಾಜಿಕ ಕಳಕಳಿಗೆ ನಾವೆಲ್ಲರೂ ತಲೆಬಾಗಲೇಬೇಕು. ರಾಜ್ಯ ಮಟ್ಟದ ಆಟೋ ಚಾಲಕರ ಸಮಾವೇಶ ಇಡೀ ರಾಜ್ಯದ ಆಟೋ ಚಾಲಕರ ಭವಿಷ್ಯವನ್ನು ನಿರ್ಮಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಒಕ್ಕೂಟದ ಜಿಲ್ಲಾಧ್ಯಕ್ಷ ವಿಜಯ ಕಲ್ಮನಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ಮನಗುಂಡಿ, ಸದಸ್ಯರಾದ ಮೋಹನ ಸಿಂಗಾಡಿ, ಗಂಗಾಧರ ಬ್ಯಾಗೋಟಿ, ಮೈಲಾರಪ್ಪ ಚಳ್ಳಮರದ, ವಿಜಯ ಬಡಿಗೇರ ಸೇರಿದಂತೆ ಆಟೋ ಚಾಲಕರು, ಮಾಲಕರು ಉಪಸ್ಥಿತರಿದ್ದರು.

### ಏಕಲಾಸಪೂರದ ಸರಕಾರಿ ಪ್ರೌಢಶಾಲೆಯಲ್ಲಿ ಕುತೂಹಲದ 'ಖಗೋಳ ವಿಸ್ಮಯ' ಅನಾವರಣ

# ಮೂರು ಗಂಟೆಗಳ ಖಗೋಳ ವಿಜ್ಞಾನ

■ವಿಜಯಸಾಕ್ಷಿ ಸುದ್ದಿ, ಮುಂಡರಗಿ



ಖಗೋಳ ಲೋಕದ ವಿಸ್ಮಯ ಜಗತ್ತನ್ನು ಕಣ್ತುಂಬಿಕೊಳ್ಳುವ ಬಯಕೆ ಹಲವರದ್ದು. ಬರಿಗಣ್ಣಿಗೆ ಕಾಣುವ ಸೂರ್ಯ-ಚಂದ್ರರಿಂದ ಹಿಡಿದು ರಾತ್ರಿಯಲ್ಲಿ ಮಿನುಗುವ ನಕ್ಷತ್ರಗಳನ್ನು ಎಣಿಸುತ್ತಲೇ ಖಗೋಳದ ವಿದ್ಯಮಾನ ಅರಿಯುವ ಕುತೂಹಲ ಅನೇಕರದ್ದು. ಅಂಥ ಕುತೂಹಲಿಗಳಿಗಾಗಿಯೇ ಶ್ರೀ ಪಾರ್ವತೆವ್ವ ಹಿರೇಬಸಪ್ಪ ಹಳೆಮನೆ ಸರಕಾರಿ ಪ್ರೌಢಶಾಲೆ ಏಕಲಾಪೂರದಲ್ಲಿ 'ಖಗೋಳ ಉತ್ಸವ: ಮೂರು ಗಂಟೆಗಳ ಖಗೋಳ ವಿಜ್ಞಾನ' ಎನ್ನುವ ವಿನೂತನ ಕಾರ್ಯಕ್ರಮ ಆಯೋಜಿಸಿತ್ತು.

ಪ್ರೊ. ಸಿಎನ್‌ಆರ್ ರಾವ್ ಇಕೋ ಕ್ಲಬ್ ಅಡಿಯಲ್ಲಿ ಭಿತ್ತಿಚಿತ್ರಗಳ ಪ್ರದರ್ಶನ, ದೂರದರ್ಶಕ ಪ್ರದರ್ಶನ, ನಕ್ಷತ್ರ ವೀಕ್ಷಣೆ, ಸಾರ್ವಜನಿಕ ಉಪನ್ಯಾಸ, ಶಾಲಾ ಮಕ್ಕಳು ಮತ್ತು ಸಾರ್ವಜನಿಕರಿಗಾಗಿ ಮಾಹಿತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು, 'ಯೂನಿವರ್ಸ್ ಇನ್ ದ ಕ್ಲಾಸ್ ರೂಂ' ಎಲ್ಲರ ಗಮನ ಸೆಳೆಯಿತು. ಖಗೋಳ ಉತ್ಸವದಲ್ಲಿ ಶಾಲಾ ಮಕ್ಕಳಿಗಾಗಿ ಚಂದ್ರನ ಕಲೆಗಳು, ಚಂದ್ರನ ಭ್ರಮಣೆ, ಪರಿಭ್ರಮಣೆ, ಗ್ರಹಣಗಳ ಭ್ರಮಣೆಯ ಅಕ್ಷಗಳ ಓರೆ ಕೋನಗಳು ಮತ್ತು ನಕ್ಷತ್ರ ಸೂಚಿ ಇತ್ಯಾದಿ ವಿದ್ಯಮಾನಗಳನ್ನು ಪರಿಚಯಿಸಲಾಯಿತು.

ಪ್ರಾರಂಭದಲ್ಲಿ ಇಕೋ ಕ್ಲಬ್ ಸಂಚಾಲಕ ಎಂ.ಎಚ್. ಸವದತ್ತಿ ಖಗೋಳಶಾಸ್ತ್ರದ ಪರಿಚಯ ಮಾಡಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್‌ಡಿಎಂಸಿ ಅಧ್ಯಕ್ಷ ಚನ್ನಪ್ಪ ಈರಪ್ಪ ಹೊಳೆಯಾಚೆ ವಹಿಸಿದ್ದರು. ಶಾಲಾ ಮುಖ್ಯೋಪಾಧ್ಯಯ ಎಂ.ಡಿ. ಮಾದರ, ಅನ್ನದಾನೇಶ್, ದುಂಡಪ್ಪ ಕಾಗವಾಡ, ಮಂಜು ಎಚ್.ಎಚ್, ಶರಣಪ್ಪ ಮಲಬಾದಿ, ಅಂದೇಶ್ ಬೀಸನಳ್ಳಿ, ಮಹೇಶಪ್ಪ ಹೊಳೆಯಾಚೆ, ಡಾ. ಚಿದಾನಂದ ರೋಣದ, ಶರಣಯ್ಯ ಹಿರೇಮಠ, ಸಿದ್ದಪ್ಪ ಉಂಡಂಡಿ, ಗುರಪ್ಪ ರೋಣದ, ಶರೀಫ್ ಕನ್ನಾಳ, ಮುದುಕಪ್ಪ ಹರಿಜನ, ರವಿ ಚೌಡಕಿ, ಮಾಂತೇಶ್ ಮುಗಳಿ, ಈರವ್ವ ಕುಂಬಾರ, ಭೂದಾನಿಗಳಾದ ಮಲ್ಲನಗೌಡ ಡಿ.ಹಳೆಮನೆ, ಏಕಲಾಸಪೂರ ಹಾಗೂ ಹೈತಾಪುರ ಗ್ರಾಮದ ಗುರು-ಹಿರಿಯರು ಭಾಗವಹಿಸಿದ್ದರು.


ಸಾಮಾನ್ಯವಾಗಿ ಸಂಕ್ರಾಂತಿಯಂದು ಸೂರ್ಯ ಪಥ ಬದಲಾಯಿಸುತ್ತಾನೆ ಎನ್ನುವ ನಂಬಿಕೆ ಇದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಸೂರ್ಯ ಡಿಸೆಂಬರ್ ತಿಂಗಳಿನಲ್ಲೇ ಪಥ ಬದಲಾಯಿಸುತ್ತಿದ್ದಾನೆ. ಇದಕ್ಕೆ ಅನೇಕ ವೈಜ್ಞಾನಿಕ ಕಾರಣಗಳಿವೆ ಎನ್ನುತ್ತಾರೆ ಸಂಪನ್ಮೂಲ ವ್ಯಕ್ತಿ ಅಶೋಕ್ ಉಂಡಿಯವರು. ತೀವ್ರ ಕುತೂಹಲಕಾರಿ ವಿಷಯವನ್ನು ಟೆಲಿಸ್ಕೋಪ್ ಮೂಲಕ ಚಂದ್ರನ ಕುಳಿಗಳು, ಗುರುಗ್ರಹದ ಉಪಗ್ರಹಗಳು, ರಾಶಿ ಚಕ್ರಪಟ್ಟಿ, ನಕ್ಷತ್ರ ಪುಂಜಗಳು, ಮಳೆ ನಕ್ಷತ್ರಗಳು, ಮಹಾವ್ಯಾದ ನಿಹಾರಿಕೆ, ಸೌರಮಂಡಲ ಪರಿಚಯವನ್ನು ಅದ್ಭುತವಾಗಿ ತಿಳಿಸಿದರು.

# ಮಹಾಯೋಗಿ ವೇಮನರ ಮೂರ್ತಿ ಅನಾವರಣ ನಾಳೆ

■ವಿಜಯಸಾಕ್ಷಿ ಸುದ್ದಿ, ಧಾರವಾಡ

ಮಹಾಯೋಗಿ ವೇಮನರ 612ನೇ ಜಯಂತ್ಯುತ್ಸವದ ಅಂಗವಾಗಿ ಯೋಗಿ ವೇಮನರ ಮೂರ್ತಿ ಅನಾವರಣ ಸಮಾರಂಭವನ್ನು ಕರ್ನಾಟಕ ವಿಶ್ವವಿದ್ಯಾಲಯದ ಮಹಾಯೋಗಿ ವೇಮನ ಪೀಠದಲ್ಲಿ ಜ.19ರಂದು ಹಮ್ಮಿಕೊಂಡಿದೆ.

ಮಧ್ಯಾಹ್ನ 12 ಗಂಟೆಗೆ ನಡೆಯುವ ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಎರೆಹೊಸಳ್ಳಿಯ ಮಹಾಯೋಗಿ ವೇಮನ ಸಂಸ್ಥಾನ ಮಠ, ರೆಡ್ಡಿಗುರುಪೀಠದ ಶ್ರೀ ವೇಮನಾನಂದ ಮಹಾಸ್ವಾಮಿಗಳು ವಹಿಸುವರು.



ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರ ಗೌರವ ಉಪಸ್ಥಿತಿಯಲ್ಲಿ ರಾಜ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ಅವರು ವೇಮನ ಮೂರ್ತಿ ಅನಾವರಣಗೊಳಿಸುವರು. ಸಾರಿಗೆ ಮತ್ತು ಮುಜರಾಯಿ ಖಾತೆ ಸಚಿವ ರಾಮಲಿಂಗಾರೆಡ್ಡಿ ಸಮಾರಂಭ ಉದ್ಘಾಟಿಸುವರು. ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿದ್ದಣ್ಣ ಲಂಗೋಟಿ ವಿಶೇಷ ಉಪನ್ಯಾಸ ನೀಡುವರು.

ಮುಖ್ಯ ಅತಿಥಿಗಳಾಗಿ ಶಾಸಕರಾದ ಅರವಿಂದ ಬೆಲ್ಲದ, ಅಬ್ಬಯ್ಯ ಪ್ರಸಾದ, ಜೆ.ಟಿ. ಪಾಟೀಲ, ಎನ್.ಹೆಚ್. ಕೋನರೆಡ್ಡಿ, ಪ್ರಕಾಶ ಕೋಳಿವಾಡ ಹಾಗೂ ಶ್ರೀ ಸದ್ಗುರು ಸಿದ್ಧಾರೂಢ ಮಠದ ಮೇಲ್ಮನೆಯ ಅಧ್ಯಕ್ಷರು ಹಾಗೂ ಮಾಜಿ ಶಾಸಕ ಡಿ.ಆರ್. ಪಾಟೀಲ ಹಾಗೂ ರಡ್ಡಿ ಸಹಕಾರ ಬ್ಯಾಂಕಿನ ಅಧ್ಯಕ್ಷ ಕೆ.ಎಲ್. ಪಾಟೀಲ, ಮಹಾಯೊಗಿ ವೇಮನ ಪೀಠದ ಸಲಹಾ ಸಮಿತಿ ಸಂಚಾಲಕ ರಮೇಶ ಜಂಗಲ ಮುಂತಾದವರು ಪಾಲ್ಗೊಳ್ಳಲಿದ್ದಾರೆ.

ಸಮಾರಂಭದ ಅಧ್ಯಕ್ಷತೆಯನ್ನು ಕವಿವಿ ಕುಲಪತಿ ಪ್ರೊ. ಕೆ.ಬಿ. ಗುಡಸಿ ವಹಿಸುವರು. ಇದೇ ಸಂದರ್ಭದಲ್ಲಿ ವೇಮನರ ಕುರಿತ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಣೆ ನಡೆಯಲಿದೆ. ಸಮಾರಂಭದಲ್ಲಿ ಸರ್ವರೂ ಪಾಲ್ಗೊಳ್ಳಬೇಕೆಂದು ಕವಿವಿ ಕುಲಸಚಿವ ಎ. ಚನ್ನಪ್ಪ, ವೇಮನ ಪೀಠದ ಸಂಯೋಜಕ ಡಾ.ಹೆಚ್.ಬಿ.ನೀಲಗುಂದ ಮನವಿ ಮಾಡಿದ್ದಾರೆ.

# ಟ್ರ್ಯಾಕ್ಟರ್ ಟ್ರಾಲಿ ಕಳ್ಳತನ ಭೇದಿಸಿದ ಪೊಲೀಸರು



■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ತಾಲೂಕು ಮತ್ತು ಡಂಬಳ ಹೋಬಳಿಯ ಗ್ರಾಮಗಳಲ್ಲಿ ಇತ್ತೀಚೆಗೆ ರೈತರ ಕೃಷಿ ಪರಿಕರಗಳು, ಟ್ರ್ಯಾಕ್ಟರ್ ಟ್ರಾಲಿಗಳ ಕಳ್ಳತನ ನಿರಂತರವಾಗಿ ಜರುಗುತ್ತಿರುವ ಕುರಿತು ಡಂಬಳ, ಮೇವುಂಡಿ, ಕಲಕೇರಿ ಗ್ರಾಮದ ರೈತರು ಮುಂಡರಗಿ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು. ಇಲಾಖೆಯ ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಪೊಲೀಸ್ 6 ಲಕ್ಷ ರೂ ಬೆಲೆಬಾಳುವ 3 ಟ್ರ್ಯಾಕ್ಟರ್ ಟ್ರಾಲಿ ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.

ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎಂ.ಬಿ. ಸಂಕದ, ನರಗುಂದ ಡಿಎಸ್‌ಪಿ ಪ್ರಭುಗೌಡ ಕಿರೇದಳ್ಳಿಯವರ ಮಾರ್ಗದರ್ಶನದಲ್ಲಿ ಮುಂಡರಗಿ ಪೊಲೀಸ್ ಇನ್ಸ್‌ಪೆಕ್ಟರ್ ಮಂಜುನಾಥ ಕುಸುಗಲ್, ಪಿಎಸ್‌ಐ ಸುಮಾ ಗೊರಾಬಾಳ ಮತ್ತು ಸಿಬ್ಬಂದಿಗಳ ತಂಡ ಜ.16ರಂದು ಪ್ರಕರಣವನ್ನು ಭೇದಿಸಿದೆ.

ಕಳ್ಳತನ ಪತ್ತೆಹಚ್ಚಲು ಶ್ರಮಿಸಿದ ಮುಂಡರಗಿ ಪೊಲೀಸ್ ಠಾಣೆಯ ಪಿಐ ಮಂಜುನಾಥ ಕುಸಗಲ್, ಪಿಎಸ್‌ಐ ಸುಮಾ ಗೊರಾಬಾಳ, ಎಎಸ್‌ಐ ಎಸ್.ಟಿ. ಕಡಬಿನ್, ವಿ.ವೈ. ತಂತ್ರಿ, ಸಿಬ್ಬಂದಿಗಳಾದ ಜೆ.ಐ. ಬಚ್ಚೇರಿ, ಸುಭಾಸ ಹಡಪದ, ಮಲ್ಲಿಕಾರ್ಜುನ ಬನ್ನಿಕೊಪ್ಪ ಮಹೇಶ ಗೊಳಗೊಳಕಿ, ಮಹೇಶ ಹೂಗಾರ, ಅವಿನಾಶ ಬ್ಯಾಳಿ, ಹೆಚ್.ಕೆ. ನದಾಫ, ಹನುಮಂತ ಡಂಬಳ, ಅಶೋಕ ಕೆಲೂರ, ಬಸುರಾಜ ಬಣಕಾರ, ಶರಣಪ್ಪ ನಾಗೇಂದ್ರಗಡ, ನಿಂಗಪ್ಪ ಪೂಜಾರ, ಸುರೇಶ ಸುತಾರ, ಪರಸುರಾಮ ರಾಠೋಡ, ಪರಶುರಾಮ ಧಾರವಾಡ, ಮುಕ್ಕಣ್ಣ ಪೂಜಾರ ಇವರಿಗೆ ಗದಗ ಜಿಲ್ಲಾ ಪೊಲೀಸ್ ಅಧೀಕ್ಷಕ ಬಿ.ಎಸ್.ನೇಮಗೌಡ, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎಂ.ಬಿ. ಸುಂಕದ, ನರಗುಂದ ಉಪ ವಿಭಾಗ ಡಿಎಸ್‌ಪಿ ಪ್ರಭುಗೌಡ ಕಿರೇದಳ್ಳಿ ಪ್ರಶಂಸೆ ವ್ಯಕ್ತಪಡಿಸಿ ಬಹುಮಾನವನ್ನು ಘೋಷಿಸಿದ್ದಾರೆ.

ಈ ಕುರಿತು ಮಾತನಾಡಿದ ಡಿಎಸ್‌ಪಿ ಪ್ರಭುಗೌಡ ಕಿರೇದಳ್ಳಿ, ರೋಣದಲ್ಲಿ 10 ಬೈಕ್ ಕಳ್ಳತನ, ಮುಂಡರಗಿಯಲ್ಲಿ 3 ಟ್ರ್ಯಾಕ್ಟರ್ ಟ್ರಾಲಿ ಕಳ್ಳತನ ಪ್ರಕರಣ ಭೇದಿಸಲಾಗಿದೆ ಎಂದರು.

# ಬಿಜೆಪಿಯಿಂದ ಸ್ವಚ್ಛತೀರ್ಥ ಅಭಿಯಾನ

■ವಿಜಯಸಾಕ್ಷಿ ಸುದ್ದಿ, ಗದಗ



ಜ.22ರಂದು ಅಯೋಧ್ಯೆಯಲ್ಲಿ ರಾಮ ಮಂದಿರ ಉದ್ಘಾಟನೆ ಹಾಗು ರಾಮಲಲ್ಲಾ ಪ್ರಾಣಪ್ರತಿಷ್ಠಾಪನೆಯ ನಿಮಿತ್ತ ದೇಶದ ಪ್ರತಿಯೊಂದು ದೇವಸ್ಥಾನ ಹಾಗೂ ಧಾರ್ಮಿಕ ಕ್ಷೇತ್ರಗಳನ್ನು ಸ್ವಚ್ಛತೀರ್ಥ ಅಭಿಯಾನ 'ದಡಿಯಲ್ಲಿ ಸ್ವಚ್ಛಗೊಳಿಸಬೇಕೆಂದು ಪ್ರಧಾನಿ ನರೇಂದ್ರ ಮೋದಿವರು ಕರೆ ನೀಡಿರುವ ಹಿನ್ನೆಲೆಯಲ್ಲಿ ಗದಗ ಶಹರ ಬಿಜೆಪಿ ಪದಾಧಿಕಾರಿಗಳು ವಾರ್ಡ್ ನಂ.27ರ ಆಂಜನೇಯ ದೇವಸ್ಥಾನ, ಬನ್ನಿಮಹಾಕಾಳಿ ದೇವಸ್ಥಾನವನ್ನು ಸ್ವಚ್ಛಗೊಳಿಸಿದರು.

ವಾರ್ಡ್ ನಂ.18ರಲ್ಲಿ ಕೊನೆರಿಹೊಂಡ, ಮೈಲಾರ ದೇವರ ದೇವಸ್ಥಾನ, ವಾರ್ಡ್ ನಂ.24ರ ರಾಮೇಶ್ವರ ದೇವಸ್ಥಾನ, ಕರಿದೇವರ ಗುಡಿ, ವಾರ್ಡ್ ನಂ.28ರಲ್ಲಿ 6ನೇ ಕ್ರಾಸ್‌ನ ಆಂಜನೇಯ ದೇವಸ್ಥಾನ, ವಾರ್ಡ್ ನಂ.34ರಲ್ಲಿ ಪಂಚಮುಖಿ ಆಂಜನೇಯ ದೇವಸ್ಥಾನಗಳನ್ನು ಈ ಅಭಿಯಾನದಡಿ ಸ್ವಚ್ಛಗೊಳಿಸಲಾಯಿತು.

ಸ್ವಚ್ಛತೀರ್ಥ ಅಭಿಯಾನದಲ್ಲಿ ವಿ.ಪ ಸದಸ್ಯ ಎಸ್.ವಿ. ಸಂಕನೂರ, ಬಿಜೆಪಿ ಜಿಲ್ಲಾಧ್ಯಕ್ಷ ರಾಜು ಕುರಡಗಿ, ಗದಗ ಶಹರ ಘಟಕದ ಅಧ್ಯಕ್ಷ ಅನಿಲ ಅಬ್ಬಿಗೇರಿ, ರವಿ ದಂಡಿನ, ನಗರಸಭಾಧ್ಯಕ್ಷೆ ಉಷಾ ದಾಸರ, ಸದಸ್ಯರಾದ ಪ್ರಕಾಶ ಅಂಗಡಿ, ನಾಗರಾಜ ತಳವಾರ, ಮಾಂತೇಶ ನಲವಡಿ, ವಿದ್ಯಾವತಿ ಗಡಗಿ, ಜೂನ್‌ಸಾಬ ನಮಾಜಿ, ಮುಖಂಡರಾದ ಡಾ. ಸಜ್ಜನರ, ಅಶೋಕ ಸಂಕಣ್ಣವರ, ಕಿಶನ ಮೇರವಾಡೆ, ವಂದನಾ ವರ್ಣೆಕರ, ತೋಟೊಸಾ ಭಾಂಡಗೆ, ಲುಕ್ಕಣಸಾ ರಾಜೋಳಿ, ಪ್ರದೀಪ ಅಡಗತ್ತಿ, ಸತೀಶ ಶಲವಡಿ, ವಿಶು ಹಳ್ಳಿಕೇರಿ, ಅಶೋಕ ದೊಡ್ಡಮನಿ, ಆರ್.ಬಿ. ದಾನಪ್ಪಗೌಡರ ಸೇರಿದಂತೆ ಪಕ್ಷದ ಪ್ರಮುಖರು, ಕಾರ್ಯಕರ್ತರು, ನಗರಸಭೆಯ ಅಧಿಕಾರಿ ವರ್ಗ, ಪೌರಕಾರ್ಮಿಕರು ಪಾಲ್ಗೊಂಡಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka